# ಜ್ಞಾನಶಕ್ತಿ

ಮಾಸ ಪತ್ರಿಕೆ

JNANASHAKTHI



ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು - 575 003

Postal Regd. No. MNG / 1023 / 2012-14
Date of Posting, Kodialbail Post Office
on 12th of every Month

ಸಂಪುಟ ೨ | ನೋಂದಣಿ ಸಂಖ್ಯೆ : KARBIL / 2005 / 16123 | ಜುಲೈ - 2013 | ಸಂಚಿಕೆ ೭


**ಶ್ರೀ ಸುಬ್ರಹ್ಮಣ್ಯ ಸಭಾದ ಮುಂದಿನ ಕಾರ್ಯಕ್ರಮಗಳು**

**28–7–2013–ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ, 4–8–2013–ಆಟಿತೊ ಆಟಕೂಟ, 20–8–2013 ಋಗುಪಾಕರ್ಮ**

# ತುಳುನಾಡಿನಲ್ಲಿ ಆಟಿ



ಭಾರತೀಯ ಸಂಸ್ಕೃತಿ ಜಗತ್ತಿನಲ್ಲಿ ವಿಶಿಷ್ಠವಾದ ಸ್ಥಾನವನ್ನು ಪಡೆದಿದೆ. ವಿಭಿನ್ನ ಪ್ರಾದೇಶಿಕ, ಜಾತಿ, ಮತಗಳ ಜನರು ತಮ್ಮ ಪರಂಪರೆ/ಆಚರಣೆಗಳ ಮೂಲಕ ಭಾರತೀಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದ್ದಾರೆ.

ಭೂತಾರಾಧನೆ ಮತ್ತು ನಾಗಾರಾಧನೆಗೆ ಪ್ರಸಿದ್ಧವಾದ ತುಳುನಾಡಿನಲ್ಲಿ ಆಟಿ ತಿಂಗಳಿಗೆ ಬಹಳ ಮಹತ್ವವಿದೆ. ಮದುವೆ, ಮುಂಜಿಗಳಂತಹ ಶುಭಕಾರ್ಯಗಳು ವಿರಳವಾಗಿದ್ದರೂ, ಆಟಿಮಾಸವನ್ನು ಅಶುಭಮಾಸವೆಂದು ಪರಿಗಣಿಸಲು ಸಕಾರಣಗಳಿಲ್ಲ. ಸತತವಾಗಿ ಸುರಿಯುತ್ತಿರುವ ಜಡಿಮಳೆ ಮತ್ತು ಕೃಷಿಕೆಲಸಗಳ ಕಾರಣದಿಂದಾಗಿ ಶುಭ ಕಾರ್ಯಗಳನ್ನು ಮುಂದೂಡಿರಬಹುದೇ ವಿನಾ ಆಟಿಮಾಸ ಅಶುಭವೆಂದು ತೀರ್ಮಾನಿಸುವುದು ಖಂಡಿತ ಸರಿಯಲ್ಲ.

ಆಟಿ ಅಮಾವಾಸ್ಯೆಯಂದು ಸೂರ್ಯೋದಯಕ್ಕೆ ಬಹಳ ಮುಂಚಿತವಾಗಿ ಪಾಲೆಮರದ ಕೆತ್ತೆಯನ್ನು ತಂದು ಕಾಳುಮೆಣಸಿನೊಂದಿಗೆ ಚೆನ್ನಾಗಿ ಕಡೆದು ತೆಗೆದ ರಸವನ್ನು ಸೋಸಿ ಮನೆಮಂದಿಯೆಲ್ಲಾ ಕುಡಿಯಬೇಕು. ನಂತರ ಬೆಳ್ತಿಗೆ ಅಕ್ಕಿ ಮತ್ತು ಮೆಂತೆಯ ಗಂಜಿ ಮಾಡಿ ಊಟ ಮಾಡಬೇಕು. ಇದರಿಂದ ಶರೀರ ಶುದ್ಧಿಯಾಗಿ, ರೋಗನಿರೋಧಕ ಶಕ್ತಿ ಹೆಚ್ಚಿ ಮನುಷ್ಯ ಆರೋಗ್ಯವಂತನಾಗುವನೆಂಬ ನಂಬಿಕೆ ಇದೆ. ಪಾರಂಪರಿಕ ಸಂಪ್ರದಾಯದಂತೆ ಪಾಲೆಮರದ ಕೆತ್ತೆಯನ್ನು ಬೆತ್ತಲಾಗಿ ನಿಂತು, ಚೂಪಾದ ಕಲ್ಲಿನಿಂದ ಜಜ್ಜಿ ತೆಗೆಯಬೇಕು. ಕತ್ತಿ, ಚಾಕುಗಳನ್ನು ಉಪಯೋಗಿಸಬಾರದೆಂದು ಹೇಳುತ್ತಾರೆ. ಆದರೆ ಇಂದು ಪಾಲೆಮರ ಯಾವುದೆಂದು ಗುರುತಿಸಲಾಗದ ಜನ ಯಾವುದೋ ಮರದ ಕೆತ್ತೆಗಳನ್ನು ತಂದು ಕಷಾಯಮಾಡಿ ಕುಡಿದು ಅಸ್ವಸ್ಥರಾದ ವಿವರಗಳನ್ನು ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಆಟಿ ತಿಂಗಳಲ್ಲಿ ಆಹಾರವಾಗಿ ಚಗಟೆಸೊಪ್ಪು, ಕಣಿಲೆ, ಕೆಸುವಿನ ಎಲೆ, ಹಲಸಿನಹಣ್ಣು ಇತ್ಯಾದಿಗಳ ವಿವಿಧ ತಿನಿಸುಗಳನ್ನು ನಮ್ಮ ಹಿಂದಿನ ಜನಾಂಗದವರು ಉಪಯೋಗಿಸುತ್ತಿದ್ದರೆಂದು ತಿಳಿದಿದ್ದೇವೆ.

ಆಟಿ ತಿಂಗಳ ಇನ್ನೊಂದು ವಿಶೇಷವೆಂದರೆ ಆಟಿಕಳೆಂಜ. ಒಂದು ನಿರ್ದಿಷ್ಟ ಜಾತಿಗೆ ಸೇರಿದ ಜನರು ಆಟಿಕಳೆಂಜನ ವೇಷ ಧರಿಸಿ, ಕೈಯಲ್ಲಿ ಒಲಿಯ ಕೊಡೆ ಹಿಡಿದು, ಗರಗರನೆ ತಿರುಗಿಸುತ್ತಾ ವಾದ್ಯಗಳೊಂದಿಗೆ ನರ್ತಿಸುತ್ತಾ, ಮನೆಮನೆಗೆ ಬಂದು ಅಕ್ಕಿ, ತೆಂಗಿನಕಾಯಿ, ಉಪ್ಪು, ಮೆಣಸು ಇತ್ಯಾದಿಗಳನ್ನು ದಾನವಾಗಿ ಪಡೆದು ಶುಭಕೋರುವ ಒಂದು ಪದ್ಧತಿ ಜಾತಿ ಸಾಮರಸ್ಯಕ್ಕೆ ಸಾಕ್ಷಿಯಾಗಿದೆ.

ಆಟಿಯ ಇನ್ನೊಂದು ವಿಶೇಷ ಆಚರಣೆ ಎಂದರೆ ಮದುವೆಯಾದ ಹೆಣ್ಣು ಮಕ್ಕಳು ತವರಿಗೆ ಹೋಗಿ ಸ್ವಲ್ಪ ದಿನ ಇದ್ದು ಬರುವುದು. ಮಹಿಳೆಯರಿಗಾಗಿ ಚೆನ್ನೆಮಣೆ ಆಟ ಇನ್ನೊಂದು ಸೊಗಸು.

ಹೀಗೆ ಕೃಷಿಪ್ರಧಾನವಾದ ತುಳುನಾಡಿನ ಜನರು ಆಟಿ ತಿಂಗಳಲ್ಲಿ ಧಾರ್ಮಿಕ ಹಿನ್ನೆಲೆಯುಳ್ಳ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸಮಾಜಮುಖಿಗಳಾಗಿ ಸಾಮರಸ್ಯದ ಜೀವನವನ್ನು ನಡೆಸುತ್ತಿರುವುದನ್ನು ಗಮನಿಸಬಹುದಾಗಿದೆ. ಬದಲಾವಣೆಯ ಗಾಳಿಗೆ ಎಲ್ಲವೂ ತೂರಿ ಹೋಗುತ್ತಿದೆ. ನಮ್ಮ ಸಂಸ್ಕೃತಿ, ಆಚರಣೆಗಳ ಬಗ್ಗೆ ಯುವಜನಾಂಗದ ಶ್ರದ್ಧೆ ಕಡಿಮೆಯಾಗುತ್ತಿರುವುದು ಸ್ಪಷ್ಟವಾಗಿದೆ. ಭೂತ ಮತ್ತು ವರ್ತಮಾನಗಳ ಕೊಂಡಿಗಳಾಗಿ ಉಳಿದಿರುವ ಕೆಲವೇ ಹಿರಿಯ ತಲೆಗಳಿಂದ ಮಾತ್ರ ಆಟಿಕಳಂಜವೇ ಮುಂತಾದ ತುಳುನಾಡಿನ ಪಾರಂಪರಿಕ ಆಚರಣೆಗಳು, ಪಾಡ್ದನಗಳು, ಗ್ರಾಮೀಣ ಕ್ರೀಡೆಗಳು ಇತ್ಯಾದಿಗಳ ಬಗ್ಗೆ ಅಲ್ಪಸ್ವಲ್ಪ ವಿವರಗಳನ್ನು ತಿಳಿಯಬಹುದಾಗಿದೆ.

ಆಧುನಿಕ ವಿದ್ಯಾಭ್ಯಾಸ ನಗರೀಕರಣ, ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಗಳು ನಮ್ಮ ಜನಾಂಗದ ಮೇಲೆ ಸಾಕಷ್ಟು ಪ್ರಭಾವವನ್ನು ಬೀರಿದೆ. ಶ್ರದ್ಧೆ ಭಕ್ತಿಯಿಂದ ತಲೆಬಾಗುತ್ತಿದ್ದ ಜನ ಇಂದು ಪ್ರಶ್ನಿಸುವ ಮತ್ತು ಖಂಡಿಸುವ ಧೈರ್ಯವನ್ನು ಪ್ರದರ್ಶಿಸುತ್ತಿದ್ದಾರೆ. ವೈಜ್ಞಾನಿಕ ಪ್ರಮಾಣವನ್ನು ಕೇಳುತ್ತಾರೆ ಅಂಧಶ್ರದ್ಧೆಯೆಂದು ನಿರಾಕರಿಸಲು ಸಿದ್ಧರಾಗಿದ್ದಾರೆ. ತುಳುನಾಡಿನ ಪಾರಂಪರಿಕ ಆಚರಣೆಗಳು ಕ್ರಮೇಣ ನಶಿಸುತ್ತಾ ಬಂದಿರುವುದು ಅತ್ಯಂತ ಸ್ಪಷ್ಟವಾಗಿದೆ.

ಪರಂಪರೆ ಮತ್ತು ಆಧುನಿಕತೆ, ಶ್ರದ್ಧೆ ಮತ್ತು ವಿಜ್ಞಾನ ಇವುಗಳ ಸಮನ್ವಯ ಸಾಧಿಸಿ, ನಮ್ಮ ಸಂಸ್ಕೃತಿಯನ್ನು ಹೇಗೆ ಉಳಿಸಿಕೊಳ್ಳಬಹುದು ಎಂಬುದೇ ಸಮಾಜವಿಜ್ಞಾನಿಗಳ ಮುಂದಿರುವ ಗಂಭೀರ ಸವಾಲಾಗಿದೆ.

*ಲೇಖನ : **ಟಿ. ಬಿ. ಮೋಹನ್ ರಾವ್***
*ಮಂಗಳೂರು*

---



## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು.**

ಸಮಾಜ ಬಾಂಧವರೇ,

**ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಯುವ ವೇದಿಕೆ ಹಾಗೂ ಮಹಿಳಾ ವೇದಿಕೆಯ ಆಶ್ರಯದಲ್ಲಿ ದಿನಾಂಕ 04-08-2013ನೇ ಆದಿತ್ಯವಾರದಂದು**

### ಆಟಿತೊ ಆಟ ಕೂಟ

ಎಂಬ ವಿಶಿಷ್ಟ ಕಾರ್ಯಕ್ರಮ ನಡೆಯಲಿದೆ. ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

**ಅಧ್ಯಕ್ಷರು** ಮತ್ತು **ಸರ್ವ ಸದಸ್ಯರು**
ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

**ಕಾರ್ಯಕ್ರಮಗಳು**

| | | |
|---|---|---|
| ಬೆಳಗ್ಗೆ 9-00ರಿಂದ | : | ಕೇರಂ ಪಂದ್ಯಾಟ - 16 ವರ್ಷದೊಳಗಿನ ವಿಭಾಗ ಹಾಗೂ 16 ವರ್ಷಕ್ಕಿಂತ ಮೇಲ್ಪಟ್ಟು<br>ಚೆನ್ನೆಮಣೆ ಆಟ – ಮುಕ್ತ ವಿಭಾಗ<br>ಕಲ್ಲಾಟ – ಮುಕ್ತ ವಿಭಾಗ |
| ಮಧ್ಯಾಹ್ನ 1-00ಕ್ಕೆ | : | **ಆಟಿಯ ವಿಶೇಷ ಖಾದ್ಯಗಳನ್ನೊಳಗೊಂಡ ಭೋಜನ** |
| 2-00ರಿಂದ | : | **“ಕರೋಕೆ” ರಸಮಂಜರಿ, ಸಮಾಜದ ಪ್ರತಿಭೆಗಳಿಂದ** |
| 4-00ರಿಂದ | : | **ಬಹುಮಾನ ವಿತರಣೆ, ರಾಷ್ಟ್ರಗೀತೆ.** |

***ಹೆಚ್ಚಿನ ಮಾಹಿತಿಗಾಗಿ :*** *ಶ್ರೀ ಪಿ. ಶ್ರೀಕಾಂತ್ ರಾವ್ - 9343361618*
*ಶ್ರೀಮತಿ ಅರುಣಾ ಸೋಮಶೇಖರ್ - 9880413243, 2452860 (R.)*
*ಶ್ರೀ ಅನಿಲ್ ರಾವ್ ಬಿ. ಎಸ್. - 9880037110*

***ವಿಶೇಷ ಸೂಚನೆ :*** *ಕೇರಂ ಪಂದ್ಯಾಟದಲ್ಲಿ ಭಾಗವಹಿಸುವವರು ಹಾಗೂ ಕರೋಕೆ ರಸಮಂಜರಿಯಲ್ಲಿ ಭಾಗವಹಿಸುವವರು ದಯವಿಟ್ಟು ಮುಂಚಿತವಾಗಿ ತಮ್ಮ ಹೆಸರನ್ನು ನೊಂದಾಯಿಸಬೇಕಾಗಿ ವಿನಂತಿ.*

---

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.)

**ಕುಡ್ಪಿ ಪದ್ಮನಾಭಯ್ಯ ಗಾರ್ಡನ್ಸ್, ಬಿಜೈ ರಸ್ತೆ, ಮಂಗಳೂರು.**

ಸಮಾಜ ಬಾಂಧವರೇ,

ತಾ. **28-7-2013**ನೇ ಆದಿತ್ಯವಾರದಂದು ಶ್ರೀ ಸುಬ್ರಹ್ಮಣ್ಯ ಸಭಾಸದನದಲ್ಲಿ

**ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ**ಯನ್ನು ನೆರವೇರಿಸಲಾಗುವುದು.

ಸಮಾಜಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ವಿನಂತಿಸುತ್ತೇವೆ.

**ಕಾರ್ಯಕ್ರಮಗಳು**

| | | |
|---|---|---|
| ಬೆಳಗ್ಗೆ 9.30ರಿಂದ | : | **ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ಹಾಗೂ ಸಾಮೂಹಿಕ ಶ್ರೀ ಸತ್ಯನಾರಾಯಣ ಪೂಜೆ ಪ್ರಾರಂಭ** |
| ಬೆಳಗ್ಗೆ 11.00ರಿಂದ | : | ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ರಿ.)ದ **ವಾರ್ಷಿಕ ಮಹಾಸಭೆ** |
| 12.00ರಿಂದ | : | **ಮಹಾಪೂಜೆ, ಪ್ರಸಾದ ವಿತರಣೆ** |
| 12.30ಕ್ಕೆ | : | **ಪ್ರಸಾದ ಭೋಜನ** |

**ಅಧ್ಯಕ್ಷರು** ಮತ್ತು ***ಸರ್ವ ಸದಸ್ಯರು***

## ಜ್ಞಾನಶಕ್ತಿ ಮಾಸ ಪತ್ರಿಕೆ

ಪ್ರಧಾನ ಸಂಪಾದಕರು :
**ಎಂ. ಎಸ್. ರಘುನಾಥ ರಾವ್**
**ಪುತ್ತೂರು**

ಸಂಪಾದಕರು :
**ಪಿ. ಶ್ರೀಕಾಂತ ರಾವ್**
ಮೊಬೈಲ್ : 9343361618

ಸಂಪಾದಕ ಮಂಡಳಿ :
**ನಾಗರಾಜ್ ವರ್ಕಾಡಿ**
**ರಘುವೀರ್ ಪೆರ್ಡೂರು**
**ಟಿ. ಬಿ. ಮೋಹನ್ ರಾವ್**
**ಕೃಷ್ಣ ಭಟ್**

ಆರ್ಥಿಕ ಸಲಹಾ ಸಮಿತಿ :
**ಕರುಣ್ ರಾವ್ ಬೆಳ್ಳೆ**
**ಅನಿಲ್ ರಾವ್ ಬಿ. ಎಸ್.**

ಗೌರವ ಸಲಹೆಗಾರರು :
**ಚೇತನ್ ಶರ್ಮ**
**ಶ್ರೀಮತಿ ಅರುಣಾ ಸೋಮಶೇಖರ್**

ಪ್ರಕಾಶಕರು :
**ಸಿ. ಎಸ್. ರಾವ್, ಉಡುಪಿ**


## ಬಂದೆಯ ಬಾಳಿನ ಬೆಳಕಾಗಿ....

ಮಂಗಳೂರಿನ ಶ್ರೀಮತಿ ವೇದಾವತಿ ಭಟ್‌ರವರ ಪುತ್ರ ಶ್ರೀ ವಿಶ್ವಾಸ್ ಮತ್ತು ಶ್ರೀಮತಿ ಲಕ್ಷ್ಮಿಯವರಿಗೆ ಜರ್ಮನಿಯ ಫ್ರಾಂಕ್‌ಫರ್ಟ್‌ನಲ್ಲಿ ಹೆಣ್ಣು ಮಗುವಿನ ಜನನ.

*****

ಮಂಗಳೂರಿನ ಡಾ. ಎ. ಪಿ. ಕೃಷ್ಣರ ಪುತ್ರಿ ಶ್ರೀಮತಿ ಅಲಕಾ ಮತ್ತು ಡಾ. ನಿಖಿಲ್ ಜೋಷಿಯವರಿಗೆ ಸ್ಕಾಟ್‌ಲ್ಯಾಂಡ್‌ನ ಈಡನ್ ಬರ್ಗ್‌ನಲ್ಲಿ ಗಂಡು ಮಗುವಿನ ಜನನ.

## ಸಂಶೋಧನಾ ಅನುದಾನ

ಮಣಿಪಾಲದ ಎಂ.ಐ.ಟಿ. ವಿದ್ಯುನ್ಮಾನ ಮತ್ತು ಸಂಪರ್ಕ ವಿಭಾಗದಲ್ಲಿ ಹಿರಿಯ ಸಹಪ್ರಾಧ್ಯಾಪಕರಾಗಿ ಸೇವೆಸಲ್ಲಿಸುತ್ತಿರುವ ಶ್ರೀ ಸಂಪತ್ ಕುಮಾರ್ ಇವರಿಗೆ ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸಂಶೋಧನಾ ಅನುದಾನ ಮಂಜೂರಾಗಿರುತ್ತದೆ. ಇವರ ಪಿ.ಎಚ್.ಡಿ. ಅಧ್ಯಯನ ಸಂಬಂಧಿ ಸಂಶೋಧನೆಗಾಗಿ ಮೂರು ವರ್ಷಗಳ ಅವಧಿಗೆ ರೂ. 10.26 ಲಕ್ಷಗಳ ಅನುದಾನ ದೊರೆಯಲಿದೆ. ಇವರು ಕುಂಭಾಸಿಯಲ್ಲಿ ನೆಲೆಸಿರುವ ಶ್ರೀ ಐ.ಪಿ. ರವೀಂದ್ರ ರಾವ್ ಹಾಗೂ ಶ್ರೀಮತಿ ಕುಮುದ್ವತಿ ದಂಪತಿಗಳ ಪುತ್ರರಾಗಿರುತ್ತಾರೆ.


*Sri Hari Adyapady*
*Proprietor*



Ph : 0824-2251597 (R)
2252119 (O)
Mobile : 9448344612
9964072489

**SHIVA ELECTRICALS**
**2nd Floor, Oznam Complex**
**Church Building, Main Road**
**BAJPE, MANGALORE**





ಪತ್ರಿಕೆಗೆ ಶುಭ ಬಯಸುವ–



**ಶ್ರೀ ಸೋಮಶೇಖರನ್**
**ಮತ್ತು**
**ಶ್ರೀಮತಿ ಅರುಣಾ ಸೋಮಶೇಖರನ್**
**ಚಿಲಿಂಬಿ, ಮಂಗಳೂರು**



ಪತ್ರಿಕೆಗೆ ಶುಭ ಬಯಸುವ–

**ಶ್ರೀಮತಿ ಪುಷ್ಪಲತಾ ಬಿ. ರಾವ್**
**ಹಾಗೂ**



**ಶ್ರೀ ಬಾಲಕೃಷ್ಣ ರಾವ್**
**ಸುರತ್ಕಲ್**





**ರಾಮಾ ಅಟೋಮೊಬೈಲ್ಸ್**



ಮಾರುತಿ ವಾಹನ ತಜ್ಞರು



**ಮಾಲೆಮಾರ್ ರಸ್ತೆ, ಕೊಟ್ಟಾರ ಚೌಕಿ, ಮಂಗಳೂರು - 575 006**
ಫೋನ್ : 0824 - 2454355, ಮೊಬೈಲ್ : 9448545702

**ಪ್ರೊ. : ಯು. ಸಂತೋಷ ಕುಮಾರ್, ಉಜ್ಜೋಡಿ**


# ಮಳೆರಾಯ

ಆರ್ಭಟ ಕೇಳುತಿದೆ
ಗುಡುಗಿನ ಸಿಡಿಲಿನ ಕಾರ್ಮುಗಿಲಿನಲಿ
ಸುಳಿಸುಳಿ ಸುಂಟರಗಾಳಿಯಲಿ
ಮಿಂಚಿನ ಸೆಳೆ ಸೆಳೆದಾಟದಲಿ
ಮೋಹಕ ವರ್ಷಧಾರೆಯಲಿ
ದರೆದರೆಯಾಗಿ ಮಿಡಿಮಿಡಿ ಮಿಡಿದಿದೆ
ಅಮೃತಸಿಂಚನ ಮಾಡಿದೆ ಧರೆಗೆ
ಓ ಮಳೆರಾಯ ನಿನ್ನಯ ಆಗಮನ
ಕೂಗಿದ ಜನತೆಗೆ ಬೇಡಿದ ಕಾಡಿಗೆ
ಸುಡುತಿಹ ಮಣ್ಣಿಗೆ
ಧೂಳಿನ ನಾಡಿಗೆ
ತರಬೇಕಿದೆ ಕಡಲಿನ ಅಲೆಗಳನೆ
ರೊಯ್ಯನೆ ಬೀಸುವ ಮಾರುತದೊಂದಿಗೆ
ಬಂದಿಳಿದಿದೆ ನೀ ಸಂಭ್ರಮದಲಿ
ಮೊಳಗಿವೆ ವಾದ್ಯ
ತೂಗಿವೆ ತಾವರೆ ಹಾಡಿವೆ ಗಿಳಿಕೋಗಿಲೆಗಳು
ತೊಟ್ಟಿಕ್ಕುವ ಹಸಿರಿನ ಎಲೆಗಳಲಿ
ಬೇರಿನ ಬದಲಿದ ಉಡುಗೆಯಲಿ
ಕೆಳಬೀಳುವ ಪಟಪಟ ಹನಿಗಳಲಿ
ಜತೆಗೂಡಿನ ಜೀರುವ ಜೀರುಂಡೆಯ ಉಲಿಗಳಲಿ
ಮೇಲೇರುವ ಮೋಹದ ವೈಭವದಲಿ
ರವರವಗುಟ್ಟುವ ಗುಡ್ಡದ ಕಾಡಿನಲಿ
ಕಣಿವೆಯ ಮೇಡಿನ ಸಂಗೀತದಲಿ
ನೆನೆದಿವೆ ನಿನ್ನಯ ಔದಾರ್ಯವನು ಜಾದೂ ಹಸ್ತವನು
ನಿನ್ನೆಯ ಬವಣೆಯ ದಿನ ಕಳೆದು
ರೈತನ ನಾಳಿನ ಫಸಲಿನ ದಿನ ಕಳೆದೆ
ಸೂಸಲಿ ಹಸುರಿನ ಸಾಮ್ರಾಜ್ಯ
ನಿನ್ನಯ ಈ ರಾಜ್ಯದಲಿ
ಹರಿಯಲಿ ಭೋರ್ಗರೆಯುತ ಜಲಧಾರೆ
ತೊಡೆಯುತ ಕಣ್ಣೀರಿನ ಒಸರ
ನರ್ಮದ ಸಿಂಧು ವ್ಯಾಜ್ಯವ ಮರೆತು
ಜಪಿಸಲಿ ಎಲ್ಲರೂ ನಿನ್ನಯ ಮಂತ್ರ
ನಾಡಿಗೆ ತಂಪನು ಎರೆಯುವ ನಿನ್ನಯ ಮಹಮಂತ್ರ.

–**ಎಂ. ಆರ್. ವಾಸುದೇವ,** ಮಂಗಳೂರು

> ನೀವು ಏನಾಗಿರುವಿರೆಂಬುದು ನಿಮಗೆ ಕಾಣಿಸದು.
> ನಿಮಗೆ ಕಾಣಿಸುವುದು ನಿಮ್ಮ ಛಾಯೆ. – **ಠಾಗೋರ್**

## ಚುಟುಕುಗಳು

ಸೀತಾಪಹರಣ ಜಟಾಯು ಮರಣ
ಲಂಕಾ ದಹನ ಸೀತಾ ಪುನರಾಗಮನ

*****

ಭುವನದಲಿ ಉದ್ಯೋಗಂ ಪುರುಷ ಲಕ್ಷಣಂ
ಸಂಸಾರದಲಿ ಉತ್ಪತ್ತಿಂ ಸ್ತ್ರೀ ಲಕ್ಷಣಂ

*****

ವರುಣನಾಗಮನದಿ ನಗುವುದು ನಿಸರ್ಗ
ಅದರಿಂದ ಸಿಗುವುದು ನಮಗೆಲ್ಲ ಸ್ವರ್ಗ
ರಜೆಯಲಿ ನಮಗೆ ಗಮ್ಮತ್ತು
ತಿಂಡಿಯ ತಿಂದೆವು ಸಕ್ಕತ್ತು
ದೇಹಕೆ ಬರುವುದು ತಾಕತ್ತು
ಮಿತಿ ಮೀರಿದರೆ ಆಪತ್ತು.

## ಬಟಾಟೆ ಪಪ್ಪಡ

ಬಟಾಟೆಯನ್ನು ಬೇಯಿಸಿ ಸಿಪ್ಪೆ ತೆಗೆದು ನುಣ್ಣಗೆ ರುಬ್ಬಿ ರುಚಿಗೆ ಉಪ್ಪು ಮೆಣಸಿನ ಹುಡಿ, ಎಳ್ಳು ಜೀರಿಗೆ ಸ್ವಲ್ಪ ಅಕ್ಕಿ ಹಿಟ್ಟು ಈ ಎಲ್ಲಾ ಸಾಮಾನನ್ನು ಚೆನ್ನಾಗಿ ಕಲಸಿ ಉಂಡೆ ಮಾಡಿ ಪ್ಲಾಸ್ಟಿಕ್ ಪೇಪರಲ್ಲಿ ಎಣ್ಣೆ ಹಚ್ಚಿ ಒತ್ತಿ ಬಿಸಿಲಿಗೆ 2–3 ದಿನ ಒಣಗಿಸಿದರೆ ಬಟಾಟೆ ಪಪ್ಪಡ ರೆಡಿ. ಊಟಕ್ಕೆ ಬಹಳ ರುಚಿ.

–**ವತ್ಸಲಾ ಯೋಗೀಶ್ ರಾವ್ ಏಳಿಂಜೆ**




**PRAMOD**
**AUTOMOBILES**
**KARANGALPADY**
**MANGALORE- 575 003**

30 Years of Service

Ph. : 2493633 (O)
2212723 (R)
M. : 9448260225

**Wholesale & Retail Dealers in**
**2 & 3 WHEELERS SPARES & ACCESSORIES**

**Prop. : Ln. K. HARSHA KUMAR**

## ವಿದೇಶ ಪ್ರಯಾಣ



**ಶ್ರೀ ಎನ್. ಪ್ರಸನ್ನ ಕುಮಾರ್ ಉಪಾಧ್ಯಾಯ** ಮತ್ತು
**ಶ್ರೀಮತಿ ಜಯಲಕ್ಷ್ಮಿ ಪ್ರಸನ್ನ ಕುಮಾರ್**
ಅಮೇರಿಕಾ ಫ್ಲೋರಿಡಾದ ಮಯಾಮಿಯಲ್ಲಿ ನೆಲೆಸಿರುವ ತಮ್ಮ ಪುತ್ರ
**ಎನ್. ರಾಮಪ್ರಸಾದ್ ಉಪಾಧ್ಯಾಯ, ಸೊಸೆ ಸೌಮ್ಯ ಪ್ರಸಾದ್**
ಹಾಗೂ **ಮೊಮ್ಮಕ್ಕಳಾದ ಶ್ರೇಯಾ ಉಪಾಧ್ಯಾಯ** ಹಾಗೂ
**ಚಿ. ಅಭಿನವ ಉಪಾಧ್ಯಾಯ,** ಇವರ ಜೊತೆ ಇರಲು ತೆರಳಿದ ಇವರ ಪ್ರಯಾಣ
ಮತ್ತು ಪ್ರವಾಸ ಸುಖಕರವಾಗಲೆಂದು ಬಯಸುವ–

**ಮಹೇಶ್ ಉಪಾಧ್ಯಾಯ** (ಮಗ)
**ಮಂಜುಳಾ ಮಹೇಶ್** (ಸೊಸೆ)

**ಮೊಮ್ಮಕ್ಕಳಾದ**
**ಅಚಿಂತ್ಯ ಉಪಾಧ್ಯಾಯ, ಅನರ್ಘ್ಯ** (ಬೆಂಗಳೂರು)
ಹಾಗೂ **ಬಂಧು ಬಳಗದವರು**

## ವಿಶೇಷ ಸೂಚನೆ

ಸಮಾಜ ಬಾಂಧವರೇ,

ಹುಟ್ಟುಹಬ್ಬ, ಬ್ರಹ್ಮೋಪದೇಶ, ಮದುವೆ ಸಮಾರಂಭ, ಇತರ ವಿಶೇಷ ಕಾರ್ಯಕ್ರಮಗಳು ಹಾಗೂ ಸ್ಥಾನೀಯ ಕಾರ್ಯಕ್ರಮಗಳ (ಛಾಯಾಚಿತ್ರ ಸಹಿತ) ವರದಿಗಳನ್ನು ಅಥವಾ ಆಮಂತ್ರಣ ಪತ್ರಿಕೆಗಳನ್ನು ಕಳುಹಿಸಿದಲ್ಲಿ **ಉಚಿತವಾಗಿ** ಪ್ರಕಟಿಸಲಾಗುವುದು. ಈ ವಿಳಾಸಕ್ಕೆ ತಲುಪಿಸಲು ವಿನಂತಿಸುತ್ತೇವೆ.

**ಸಂಪಾದಕರು, 'ಜ್ಞಾನಶಕ್ತಿ' ಮಾಸ ಪತ್ರಿಕೆ**
**ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ಚರ್ಚ್ ರಸ್ತೆ, ಮಂಗಳೂರು - 575 003**
**ಇ–ಮೇಲ್ ವಿಳಾಸ : jnanashakthisss@gmail.com**

## ಪಡುಬಿದ್ರಿ–ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ನಡೆದ "ನರಸಿಂಹ ಜಯಂತಿ"



ಪಡುಬಿದ್ರಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ದಿನಾಂಕ 23-05-2013ನೇ ಗುರುವಾರ ನರಸಿಂಹ ಜಯಂತಿಯನ್ನು ಆಚರಿಸಲಾಯಿತು. ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಗಳ ನೇತೃತ್ವದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಕಲಶಾಭಿಷೇಕವು ಸಂಪನ್ನಗೊಂಡಿತು. ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಮಹಿಳಾ ವೇದಿಕೆಯ ಸದಸ್ಯೆಯರಿಂದ ಶ್ರೀ ವಿಷ್ಣು ಸಹಸ್ರನಾಮ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ರಾತ್ರಿ ಶ್ರೀ ದೇವರಿಗೆ ರಂಗಪೂಜೆಯು ಸಂಪನ್ನಗೊಂಡಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ನಮ್ಮ ಸಮಾಜ ಬಾಂಧವರು ಅತೀ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು.

## ಪಡುಬಿದ್ರಿ – ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ಜರಗಿದ ವರ್ಧಂತ್ಯುತ್ಸವ ಹಾಗೂ ಶಂಕರ ಜಯಂತಿ



ಪಡುಬಿದ್ರಿಯ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ದಿ.15-05-2013ನೇ ಬುಧವಾರದಂದು ಶ್ರೀ ವಿಷ್ಣುಮೂರ್ತಿ ದೇವರ ವರ್ಧಂತ್ಯುತ್ಸವ ಹಾಗೂ ಶಂಕರ ಜಯಂತಿಯನ್ನು ಸಮಾಜ ಬಾಂಧವರೊಡಗೂಡಿ ಆಚರಿಸಲಾಯಿತು. ಬೆಳಗ್ಗೆ ಗಂಟೆ 11.30ರ ತನಕ ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ ಇದರ ಮಹಿಳಾ ವೇದಿಕೆಯ ಸದಸ್ಯೆಯರಿಂದ ಹಾಗೂ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಮಹಿಳಾ ಸದಸ್ಯೆಯರಿಂದ ಶ್ರೀ ವಿಷ್ಣು ಸಹಸ್ರನಾಮ ಹಾಗೂ ಭಜನಾ ಕಾರ್ಯಕ್ರಮ ನಡೆಯಿತು. ಬಳಿಕ ಶ್ರೀಮದ್ ಶಂಕರಾಚಾರ್ಯರಿಗೆ ಅರ್ಚಕರಾದ ಶ್ರೀ ಜಗದಾಭಿರಾಮ ಸ್ವಾಮಿಯವರು ಪೂಜೆ ಸಲ್ಲಿಸಿದರು. ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಅಧ್ಯಕ್ಷರಾದ ಶ್ರೀಯುತ ಸಿ.ಎಸ್. ರಾವ್ ಇವರು ಶ್ರೀಮದ್ ಶಂಕರಾಚಾರ್ಯರ ಜೀವನ ವೈಶಿಷ್ಟ್ಯಗಳ ಬಗ್ಗೆ ಅವರು ಸಮಾಜಕ್ಕೆ ನೀಡಿದ ಅಮೂಲ್ಯ ಕೊಡುಗೆಗಳ ಬಗ್ಗೆ ನೆರೆದ ಸಮಾಜಬಾಂಧವರಿಗೆ ಸವಿಸ್ತಾರವಾಗಿ ತಿಳಿಸಿದರು. ಪ್ರಸಾದ ವಿತರಣೆಯ ಬಳಿಕ ಅನ್ನಸಂತರ್ಪಣೆ ನಡೆಯಿತು. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ನಮ್ಮ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

*ವರದಿಗಳು : **ಸೀತಾದೇವಿ ಭಾಸ್ಕರ್ ರಾವ್***
*ನಿರ್ದೇಶಕರು : **ಸ್ಥಾನಿಕ ಬ್ರಾಹ್ಮಣ ಸಭಾ ಪಡುಬಿದ್ರಿ***

**SHARMA ENTERPRISES**
**KANKANADY, MANGALORE - 575 002**
Mob. : 9844187083
Prop. : *Chethan Sharma*

**PREETHIKA AUTOMOBILES**
✆ 2493633 9845851573
*Wholesale & Retail Dealers in :*
***2 & 3 WHEELERS, SPARES & ACCESSORIES***
**KARANGALPADY, MANGALORE - 575 003**
*Dealers in :*
Minda Switches, M. K. Products, Swiss Auto Products, Power Coils

*Manish Rao U.*
Tel : (O) 2223301
Mobile : 9448726499 / 8884284939
**NAVA COMPUTER**

*Dealers in : Computers Hardware and Peripherals*
*Computer Sales & Services*
*Alvares Centre, N.H. 17, Nanthoor, Mangalore - 575 005*

Phone : 0824 - 2440110, 2213946
**VISHRAM MOTORS (P.) LTD.**
**No. 4, Kodialbail Church Building**
**K. S. Rao Road, MANGALORE - 575 003**
*Authorised Dealers for :*
**Vijai Super GP 150 &**
**Vikram 3 Wheelers (Petrol & Diesel)**


Prop. : *Kishore Kumar Kedige*
Ph. : 2231524
M. : 9880726325
**KYADIGE AUTOMOBILES**


**Opp. to D. P. Stores**
**Main Road, B. C. Road, Bantwal Tq.**
*Dealers in : 2 & 3 WHEELERS SPARES*



# 'ನಮ್ಮ ಸಾಧಕರು'



## ಡಾ. ಎಸ್. ಹರೀಶ್ ಜೋಶಿ

ಸಂತ ಅಲೋಶಿಯಸ್ ಕಾಲೇಜಿನ ಪ್ರಾಣಿಶಾಸ್ತ್ರ ವಿಭಾಗದಲ್ಲಿ ಡಾ। ಹರೀಶ್ ಜೋಶಿಯವರು 36 ವರ್ಷಗಳ ಕಾಲ ಸೇವೆ ಸಲ್ಲಿಸಿದ್ದು ತನ್ನ ಸುದೀರ್ಘ ಸೇವಾ ಅವಧಿಯಲ್ಲಿ ಹಲವು ಶೈಕ್ಷಣಿಕ ಜವಾಬ್ದಾರಿ ಹಾಗೂ ಸಾಧನೆಯನ್ನು ಮಾಡಿ ತನ್ನ ಸಂಸ್ಥೆಗೆ ಕೀರ್ತಿಯನ್ನು ತಂದಿರುತ್ತಾರೆ. ಶೈಕ್ಷಣಿಕ ಹುದ್ದೆಗಳಾದ Councillor of BDP Programme of Indira Gandhi open University, Teaching Faculty of Distance Studies of P.G. courses of Kuvempu University at the centre of St. Aloysius College, Mangalore. BOAE ಮತ್ತು BOS of Zoology Mangalore University, Life member of Biotechnology Association of India, Calicut and National Environmental Academy, New Delhi, President of Staff Association and as a Secretary of College Staff Council of St Aloysius College. Member of Ecology Commission appointed by the Jesuit Provincial of Karnatakaಗಳನ್ನು ತನ್ನದೇ ಆದ ಕಾರ್ಯಕ್ಷಮತೆಯಿಂದ ನಿರ್ವಹಿಸಿದ್ದಾರೆ.

ಡಾ। ಜೋಶಿಯವರ ಹತ್ತು ಹಲವಾರು ಸಾಧನೆಯ ಸರದಿಯಲ್ಲಿ ಪಶ್ಚಿಮ ಘಟ್ಟದ ಬಗೆಗಿನ ಸಂಶೋಧನಾ ಪ್ರಬಂಧವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿನ ವಿಭಿನ್ನ ಸಂಚಿಕೆಯಲ್ಲಿ ಪ್ರಕಟಗೊಂಡಿರುತ್ತದೆ. 8 ಹೊಸ ತರದ ಕಪ್ಪೆಗಳ ಸಂಶೋಧನೆಯ ವಿವರಣೆಯು Paris Musiumನಿಂದ ಪ್ರಕಟಗೊಳ್ಳುವ ಸಂಶೋಧನಾ ಸಂಚಿಕೆಯಲ್ಲಿ ಪ್ರಕಟಗೊಂಡಿರುತ್ತದೆ. ಡಾ॥ ಜೋಶಿಯವರ 15 ವೈಜ್ಞಾನಿಕ ಪ್ರಬಂಧಗಳು ಜಪಾನಿನ ಶ್ರೇಷ್ಠ ವೈಜ್ಞಾನಿಕ ಸಂಚಿಕೆಯಾದ "Cytologia" ದಲ್ಲಿ ಪ್ರಕಟಗೊಂಡಿರುತ್ತದೆ. ಡಾ॥ ಜೋಶಿಯವರ ಸಂಶೋಧನಾ ಪ್ರಕಟಣೆಗೆ ಕರ್ನಾಟಕ ಸರಕಾರವು ವಿಜ್ಞಾನ ಮತ್ತು ತಂತ್ರಜ್ಞಾನ (DST) ಇಲಾಖೆಯು 2009–2010ರ ಸಾಲಿನ **"ಶ್ರೇಷ್ಠ ಸಂಶೋಧನಾ ಪ್ರಕಟಣೆ"** ಪ್ರಶಸ್ತಿ ಪತ್ರ ಹಾಗೂ ರೂ. 25,000 ನಗದು ಬಹುಮಾನವನ್ನು ಕೊಟ್ಟು ಗೌರವಿಸಿದೆ. ಅಂದಿನ ಪ್ರಧಾನಮಂತ್ರಿಯವರ ವಿಜ್ಞಾನ ಸಲಹೆಗಾರರಾಗಿರುವ Prof C.N.R. Raoರವರು ಸಂಸ್ಥೆಯ ಪರವಾಗಿ, ಸೆಪ್ಟೆಂಬರ್ 28, 2010ರಂದು ಪ್ರಶಸ್ತಿಪ್ರದಾನ ಮಾಡಿರುತ್ತಾರೆ.

ಡಾ। ಜೋಶಿಯವರು ಜಪಾನಿನ ವಿಜ್ಞಾನಿಗಳಾದ ಡಾ। Kuramoto, Fakuoaka, University Dr. Sumida, Dr Alan, Hiroshima University, Japan ಇವರೊಂದಿಗೆ 8 ವರ್ಷಗಳ ಕಾಲ ಸಂಶೋಧನೆ ಮಾಡಿ 6 ವೈಜ್ಞಾನಿಕ ಪ್ರಬಂಧಗಳನ್ನು ಬರೆದು ಅಂತಾರಾಷ್ಟ್ರೀಯ ಮಟ್ಟದ ಸಂಚಿಕೆಯಲ್ಲಿ ಪ್ರಕಟಪಡಿಸಿದ್ದಾರೆ.

ಡಾ। ಜೋಶಿಯವರು ರೈತಪರ ಕಾರ್ಯಕ್ರಮಗಳಾದ ಎರೆಹುಳಗೊಬ್ಬರದ ತಯಾರಿಕೆಯನ್ನು ವೈಜ್ಞಾನಿಕವಾಗಿ ಅಭಿವೃದ್ಧಿಪಡಿಸುವಂತಹ ವಿಚಾರಗಳು ಜೀವ ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಯಾಗಿದೆ. ಎರೆಹುಳು ತಯಾರಿಕಾ ವಿಧಾನವನ್ನು ಹಲವು ಶಾಲಾ ಕಾಲೇಜುಗಳಲ್ಲಿ ಅನಾಥಾಶ್ರಮಗಳಲ್ಲಿ, ಚರ್ಚುಗಳಲ್ಲಿ, ಬಡಾವಣೆಗಳಲ್ಲಿ, ಸ್ವಸಹಾಯ ಸಂಘಗಳಲ್ಲಿ, ಲಯನ್ಸ್ ಮತ್ತು ರೋಟರಿ ಕ್ಲಬ್‌ಗಳಲ್ಲಿ ಕಾರ್ಯಕ್ರಮಗಳ ಮೂಲಕ ಪ್ರಚುರಪಡಿಸಿ ರೈತಾಪಿವರ್ಗಕ್ಕೆ ಅಲ್ಲದೆ, ಆಸಕ್ತಿವಂತರಿಗೂ ತಿಳಿಸಿಕೊಟ್ಟಿರುತ್ತಾರೆ. (ಇದರ ಬಗೆಗಿನ ಲೇಖನವನ್ನು ಈ ಬಾರಿ ನಮ್ಮ ಪತ್ರಿಕೆಯಲ್ಲೂ ನೀಡಲಾಗಿದೆ).

ಇಂತಹ ಹತ್ತುಹಲವಾರು ವೈಜ್ಞಾನಿಕ ಸಾಧನೆಗಳನ್ನು ಮಾಡಿದ ಡಾ। ಜೋಶಿಯವರ ಕಾರ್ಯವೈಖರಿಯನ್ನು ಗುರುತಿಸಿದ National Environmental Science Academy, New Delhiಯವರು 2011ರಲ್ಲಿ Academyಯ ಉನ್ನತ ಗೌರವವಾದ "Fellowship Award" ನ್ನು ಕೊಟ್ಟು ಗೌರವಿಸಿರುತ್ತಾರೆ. ಅಲ್ಲದೆ ಡಾ। ಜೋಶಿಯವರು ಇತ್ತೀಚೆಗೆ ಬರೆದು ಪ್ರಕಟಿಸಿದ ಪುಸ್ತಕವಾದ "Guidelines for Environmental Activities for Schools and Colleges"ಎಂಬ ಪುಸ್ತಕವನ್ನು ಡಾ। ಕಸ್ತೂರಿರಂಗನ್, Former Director and Space Scientist ISRO, Bangaloreರವರು Academyಯ Silver Jubilee celebration ನ ಸಮಾರಂಭದಲ್ಲಿ ಬಿಡುಗಡೆ ಮಾಡಿರುತ್ತಾರೆ.

ಡಾ। ಜೋಶಿಯವರು ಸಾಹಿತ್ಯ, ಕಥೆ, ಹಾಸ್ಯ, ಕವನ ಚಿತ್ರಕಲೆಗಳಲ್ಲೂ ಆಸಕ್ತಿ ಹಾಗೂ ಪರಿಣತಿಯನ್ನು ಹೊಂದಿರುತ್ತಾರೆ.

ಜೀವನಶ್ರೇಷ್ಟ ಸಾಧನೆ ಮಾಡಿರುವ ನಮ್ಮ ಸಮಾಜದ ಹೆಮ್ಮೆಯ ಈ ಸಾಧಕನನ್ನು ಅಭಿನಂದಿಸುತ್ತದೆ **"ಜ್ಞಾನ ಶಕ್ತಿ"** ಬಳಗ.

*Prop. : P. Srikanth Rao* Mobile : 9343361618

**M/s. SAMARPAN**

***HOUSE OF STATIONERY***

**Near Vijaya Pen Mart**
**Hampankatta, Mangalore - 1**



ಪತ್ರಿಕೆಗೆ ಶುಭ ಬಯಸುವ–

**ಶ್ರೀ ಕಾಂತಾವರ ಜಯಪ್ರಕಾಶ್**
**ಮತ್ತು ಶ್ರೀಲತಾ**
**ಹಾಗೂ**
**ತನ್ವಿ, ನಿವೇದ, ದೃತಿ ಮತ್ತು ದ್ರುವ್**

**Sharekhan**
Your guide to the financial jungle

EQUITIES | DERIVATIVES | COMMODITIES
CURRENCY | MUTUAL FUND | IPOs
PMS | DEMAT

**Pradeep Rao K.**
NAVADURGA FINANCIALS
Ph: 0824-2412905, 2441318 Mobile: 94481 91028

**ಹೆಬ್ಬಾರ್ ಎಂಟರ್‌ಪ್ರೈಸಸ್**
**ಭೂವರಾಹ ಕಾಂಪ್ಲೆಕ್ಸ್, ವಾದಿರಾಜ ರಸ್ತೆ, ಉಡುಪಿ - 576 101**

*ಶುಭ ಸಮಾರಂಭಗಳಿಗೆ ಬೇಕಾಗುವ*
*ಕ್ಯಾಟರಿಂಗ್ ವ್ಯವಸ್ಥೆ, ಶಾಮಿಯಾನ, ಗ್ಯಾಸ್‌ಸ್ಟವ್, ಟೇಬಲ್, ಕುರ್ಚಿ, ಪಾತ್ರೆಗಳು*
*ಹಾಗೂ ಇನ್ನಿತರ ಎಲ್ಲಾ ವ್ಯವಸ್ಥೆಗಳನ್ನೂ ಸಕಾಲದಲ್ಲಿ ಒದಗಿಸಲಾಗುವುದು.*

ಫೋನ್ : 2531493 (O), 2530851 (R), ಮೊಬೈಲ್ : 9448437893

The RIGHT Place for the Customer

**RAJESH**
**POWER PRESS**
PRINTERS & PUBLISHERS

**DARBE - 574 202, PUTTUR, D. K., KARNATAKA**
Phone : (08251) 231696, 231697 & 322386
E-mail : msraghunathrao@hotmail.com

ಪತ್ರಿಕೆಗೆ ಶುಭ ಬಯಸುವ–

**ಶ್ರೀ ನಾಗರಾಜ್ ಶರ್ಮ**
**ಹಾಗೂ**
**ಶ್ರೀಮತಿ ಆರತಿ ಶರ್ಮ**
**ಪ್ರಮೋದ್ ಟವರ್ಸ್, ಮಂಗಳೂರು**

ಪತ್ರಿಕೆಗೆ ಶುಭ ಬಯಸುವ–

**ಡಾ. ದಿವಾಕರ್ ರಾವ್**
**ಹಾಗೂ**
**ಶ್ರೀಮತಿ ಸ್ನೇಹಲತಾ ಮತ್ತು ಕುಟುಂಬ**
**ಸುರತ್ಕಲ್, ಮಂಗಳೂರು**

# ಎರೆಗೊಬ್ಬರ ತೊಟ್ಟಿಯ ಆವಿಷ್ಕಾರ

**ಡಾ। ಎಸ್. ಹರೀಶ್ ಜೋಶಿ**
Retd. Professor & Head
Dept. of Zoology
St. Aloysius College, Mangalore
Mob : 9900094951

ಇಂದು ನಾವು ವಾಸಿಸುವ ಸುತ್ತಲಿನ ವಾತಾವರಣ ತುಂಬಾ ಕಲುಷಿತಗೊಂಡಿದೆ. ಅದಕ್ಕೆ ಹಲವಾರು ಕಾರಣಗಳಿವೆ. ಒಂದು ಮುಖ್ಯವಾದ ಕಾರಣವೇನೆಂದರೆ, ಮಾನವನ ಪ್ರತಿನಿತ್ಯದ ಚಟುವಟಿಕೆಗಳಿಂದ ಉಂಟಾಗುವ ತ್ಯಾಜ್ಯವಸ್ತುಗಳೇ ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುತ್ತದೆ. ಪಟ್ಟಣಗಳಲ್ಲಿ ಜನಸಂಖ್ಯೆ ಹೆಚ್ಚಾದಂತೆ ತ್ಯಾಜ್ಯ ವಸ್ತುಗಳ ಸಂಗ್ರಹ ಕೂಡಾ ಹೆಚ್ಚುತ್ತದೆ. ಮಹಾನಗರಪಾಲಿಕೆಯವರು ರಸ್ತೆಗಳ ಬದಿಗಳಲ್ಲಿ ಸಂಗ್ರಹವಾಗಿರುವ ತ್ಯಾಜ್ಯವಸ್ತುಗಳನ್ನು ಲಾರಿ ಮುಖೇನ ಸಂಗ್ರಹಿಸಿ ಪಟ್ಟಣದಿಂದ ದೂರದ ಸ್ಥಳಗಳಿಗೆ ರವಾನಿಸಿದರೂ ಕೂಡಾ ಸಮಸ್ಯೆ ಬಗೆಹರಿದಂತಾಗುವುದಿಲ್ಲ.



ಡಾ। ಕಸ್ತೂರಿರಂಗನ್, ಮಾಜಿ ಡೈರೆಕ್ಟರ್ ಮತ್ತು ಬಾಹ್ಯಾಕಾಶ ವಿಜ್ಞಾನಿ, ISRO, Bangalore, Chairman of Planning Commission, New Delhiರವರು ಡಾ। ಜೋಶಿಯವರು ಬರೆದ ಪುಸ್ತಕವನ್ನು ದೆಹಲಿಯಲ್ಲಿ ಬಿಡುಗಡೆ ಮಾಡಿರುತ್ತಾರೆ.



ಎರೆಗೊಬ್ಬರ ತೊಟ್ಟಿಯ ಮುಂಭಾಗದ ನೋಟ.



ಎರೆಗೊಬ್ಬರ ತೊಟ್ಟಿಯ ಒಳನೋಟ.



ಎರೆತೊಟ್ಟಿಯಲ್ಲಿನ ರಂಧ್ರಗಳಿರುವ ಎದುರುಗೋಡೆಯ ವಿನ್ಯಾಸ.

ಯಾಕೆಂದರೆ ಅಲ್ಲಿ ಕೂಡಾ ತ್ಯಾಜ್ಯ ಸಂಗ್ರಹವಾಗಿ ಪರಿಸರ ಕಲುಷಿತಗೊಂಡು ಅಲ್ಲಿನ ಜನರು ನಾನಾ ರೋಗರುಜಿನಗಳಿಗೆ ತುತ್ತಾಗುತ್ತಾರೆ.

ಇಂತಹ ಸಂದರ್ಭದಲ್ಲಿ ಜನರು ತಮ್ಮ ತಮ್ಮ ತ್ಯಾಜ್ಯ ವಸ್ತುಗಳ ಸೂಕ್ತ ನಿರ್ವಹಣೆಯನ್ನು ತಾವೇ ಮಾಡಿದಲ್ಲಿ ಇಂತಹ ಬೃಹತ್ ಸಮಸ್ಯೆಯನ್ನು ಸುಲಭದಲ್ಲಿ ಕಡಿಮೆ ಮಾಡಬಹುದು. ಪ್ರತಿದಿನ, ಪ್ರತಿಮನೆಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವಸ್ತುಗಳನ್ನು ಎರೆಹುಳಗಳ ಮೂಲಕ ಉತ್ತಮ ತರದ ಗೊಬ್ಬರವನ್ನಾಗಿ ಪರಿವರ್ತಿಸಬಹುದು. ತ್ಯಾಜ್ಯವಸ್ತುಗಳನ್ನು ಗೊಬ್ಬರವನ್ನಾಗಿ ಪರಿವರ್ತಿಸಲು ಎರೆಗೊಬ್ಬರ ತೊಟ್ಟಿಯು ಬಹುಮುಖ್ಯ ಪಾತ್ರವಹಿಸುವ 'ವರದಾನ'ವಾಗಿದೆ.

**ಎರೆಗೊಬ್ಬರ ತೊಟ್ಟಿಯ ವಿವರಣೆ :**

1. ಎರೆಹುಳು ಗೊಬ್ಬರ ತೊಟ್ಟಿಯು (Vermibin) ಒಂದು ಸಣ್ಣ ಮಟ್ಟಿನ ಮನೆಗೆ ತಕ್ಕುದಾದ, ವೈಜ್ಞಾನಿಕ ತಳಹದಿಯ ಮೇಲೆ ನಿರ್ಮಿಸಿದ ಕಸವನ್ನು ಗೊಬ್ಬರವನ್ನಾಗಿ ಮಾಡುವ ಘಟಕವಾಗಿದೆ.

2. ಈ ತೊಟ್ಟಿಯು ಆಯತಾಕಾರವಾಗಿದ್ದು 3¼ ಅಡಿ ಉದ್ದ, 1½ ಅಡಿ ಅಗಲ, 2 ಅಡಿ ಎತ್ತರವಾಗಿದೆ. ಇದರಲ್ಲಿ ಎರಡು ವಿಭಾಗಗಳಿದ್ದು ಅದರ ತಳಭಾಗದಲ್ಲಿ ಚಿತ್ರದಲ್ಲಿ ತೋರಿಸಿದಂತೆ ನಿರ್ದಿಷ್ಟ ಕಡೆಗೆ ಇಳಿಜಾರನ್ನು ಹೊಂದಿರುತ್ತದೆ. ಇದರಿಂದ ಹೆಚ್ಚಿನ ನೀರು ಒಂದೇ ಕಡೆಗೆ ಇಳಿದು, ಅದನ್ನು ಸಂಗ್ರಹ ಮಾಡಲು ಅನುಕೂಲವಾಗುತ್ತದೆ. ಅಂತಹ ನೀರನ್ನು ಒಂದು ನಿರ್ದಿಷ್ಟ ಸಮಯದಲ್ಲಿ ಹಾಗೂ ಕ್ರಮದಲ್ಲಿ ಸಂಗ್ರಹಿಸಿದಾಗ ಅದನ್ನು "ಎಳೆನೀರು" (ಬಗ್ಗಡ) ಎಂದು ಕರೆಯುತ್ತಾರೆ. ಈ ನೀರು ಹಲವು ಉಪಯುಕ್ತ ಅಂಶಗಳನ್ನು ಹೊಂದಿರುತ್ತದೆ.

3. ಈ ಎರಡು ಕೋಣೆಗಳಿಗೆ ಬೇರೆ ಬೇರೆ ಮುಚ್ಚಳಗಳಿದ್ದು ಹಲವಾರು ರಂಧ್ರಗಳಿಂದ ಕೂಡಿದ್ದು, ಇಲಿಗಳು, ಹಕ್ಕಿ, ಕಪ್ಪೆಗಳು ಒಳಗೆ ನುಗ್ಗಿ ಹುಳಗಳನ್ನು ತಿನ್ನದಂತೆ ತಡೆಯುತ್ತವೆ. ಅಲ್ಲದೆ ರಂಧ್ರಗಳ ಮೂಲಕ ಹುಳಗಳಿಗೆ ಗಾಳಿಯು ನಿರಂತರವಾಗಿ ಸಿಕ್ಕುತ್ತದೆ.

4. ತೊಟ್ಟಿಯ ಸುತ್ತಲೂ 1½ ಇಂಚು ವ್ಯಾಸದ ಎದುರು ಗೋಡೆಯನ್ನು ಹೊಂದಿದ್ದು, ಅದರಲ್ಲಿ 30ರಿಂದ 40 ರಂಧ್ರ ಹೊಂದಿರುತ್ತದೆ. ಅದು ಇಡೀ ಪೆಟ್ಟಿಗೆಗೆ ನಿರಂತರವಾಗಿ ಗಾಳಿಯನ್ನು ಒದಗಿಸುತ್ತದೆ. ಇದರಿಂದ ಹುಳುಗಳು ಆರೋಗ್ಯವಾಗಿದ್ದು ಮರಿಗಳ ಉತ್ಪಾದನೆಯು ನಿರಾತಂಕವಾಗಿ ನಡೆಯುತ್ತದೆ. (Vermiculture) ಇದು ಸತ್ವಯುತ ಉತ್ಪಾದನಾ ಪ್ರಕ್ರಿಯೆಗೆ ಪೂರಕವಾದ ಅಂಶವಾಗಿರುತ್ತದೆ.

5. ಪೆಟ್ಟಿಗೆಯ ಅಡಿಭಾಗದಲ್ಲಿ ನೀರಿನ ತಟ್ಟು ಹೊಂದಿದ್ದು, ಅದರಲ್ಲಿ ನೀರು ಸದಾ ನಿಂತಿರಬೇಕಾಗಿರುತ್ತದೆ. ಇದು ಇರುವೆಗಳು ಬರದಂತೆ ತಡೆಯನ್ನುಂಟುಮಾಡುತ್ತದೆ.



ಎರೆತೊಟ್ಟಿಯ ತಳಭಾಗದಲ್ಲಿರುವ ಚಲಿಸುವ ಗಾಲಿಯ ವ್ಯವಸ್ಥೆ.

6. ಇಡೀ ಘಟಕದ ತಳಭಾಗಗಳಲ್ಲಿ ತಿರುಗುವ ಚಕ್ರವನ್ನು ಅಳವಡಿಸುವುದರಿಂದ ಯಾವ ಕಡೆಗೂ ತೊಟ್ಟಿಯನ್ನು ಶ್ರಮವಿಲ್ಲದೆ, ಹಿಡಿಗಳ ಮೂಲಕ ಒಯ್ಯಬಹುದಾಗಿದೆ. ತೊಟ್ಟಿಯು ಸದಾ ನೆರಳಿನಲ್ಲಿರುವಂತೆ ನೋಡಿಕೊಳ್ಳುವ ಅಗತ್ಯವಿರುತ್ತದೆ. ನೀರು ಹಾಕುವರೆ ನೀರಿನ ನಳ್ಳಿ ಇರುವ ಕಡೆಗೆ ಘಟಕವನ್ನು ಚಲಾಯಿಸಬಹುದು.

7. ಇಡೀ ಘಟಕವು ಫೈಬರ್ ಗ್ಲಾಸ್‌ನಿಂದ ಮಾಡಲಾಗಿರುವುದರಿಂದ ಸುಮಾರು 10-15 ವರ್ಷಗಳವರೆಗೆ ಬಾಳಿಕೆ ಬರಬಹುದೆಂದು ಅಂದಾಜಿಸಲಾಗಿದೆ.

8. ಇಂತಹ ತೊಟ್ಟಿಯಲ್ಲಿ ಪ್ರತಿ ಬಾರಿಗೂ 20ರಿಂದ 25 kgಯಷ್ಟು ಸಾವಯವ ಗೊಬ್ಬರವನ್ನು ಉತ್ಪಾದಿಸಬಹುದು.

**ಎರೆಗೊಬ್ಬರ (ಎರೆಹುಳ ಗೊಬ್ಬರ) ಮಾಡುವ ವಿಧಾನ :**

1. ಮೊಟ್ಟಮೊದಲು ಎರೆಗೊಬ್ಬರವನ್ನು ಉತ್ಪಾದಿಸಲು ಬೇಕಾಗುವ ಮೂಲವಸ್ತುಗಳನ್ನು ಮುಂದಾಗಿ ಸಂಗ್ರಹಿಸಿಡಬೇಕು. ಆ ವಸ್ತುಗಳು ಯಾವುದೆಂದರೆ, ಹುಡಿಗೊಬ್ಬರ (ಗೋಬರ್ ಗ್ಯಾಸ್) ಒಣಗಿದ ತ್ಯಾಜ್ಯವಸ್ತುಗಳಾದ ಹುಲ್ಲು, ತೆಂಗಿನಗರಿ, ಅಡಿಕೆಗರಿ, ಸೊಪ್ಪು, ಜೋಳದ ಸಿಪ್ಪೆ, ಬಾಳೆಎಲೆ, ಕಬ್ಬಿನ ಸಿಪ್ಪೆ, ಕಬ್ಬಿನ ಮಡ್ಡೀ, ದವಸ ಧಾನ್ಯಗಳನ್ನು ಬೆಳೆದ ನಂತರ ಉಳಿಯುವ ಸ್ವಲ್ಪ ಒಣಗಿದ ಪದಾರ್ಥಗಳು, ನೀರುಳ್ಳಿ, ಬೆಳ್ಳುಳ್ಳಿ, ಓರೆಂಜ್, ಮುಸುಂಬಿ ಇತ್ಯಾದಿ ಹುಳಿ ಅಂಶವಿರುವ ಪದಾರ್ಥಗಳನ್ನು ಹಾಕಬಾರದು.



ಎರೆತೊಟ್ಟಿಯಲ್ಲಿನ ನಳ್ಳಿಯ ವ್ಯವಸ್ಥೆ.

2. ಕಾಗದ, ರಟ್ಟು ಮುಂತಾದ ವಸ್ತುಗಳನ್ನು ಒಂದೆರಡು ಸಲ ನೀರಿನಲ್ಲಿ ತೊಳೆದು ಅದರ ಮಸಿಯ ಅಂಶವನ್ನು ಕಡಿಮೆ ಮಾಡಿ ಉಪಯೋಗಿಸಬೇಕು. ತ್ಯಾಜ್ಯವಸ್ತುಗಳನ್ನು ಉಪಯೋಗಿಸುವ ಮೊದಲು ಅದರಲ್ಲಿರುವ ಕಲ್ಲುಗಳು, ಪ್ಲಾಸ್ಟಿಕ್ ಹಾಗೂ ಇನ್ನಿತರ ಕರಗದಂತಹ ವಸ್ತುಗಳನ್ನು ಹೊರತೆಗೆಯಬೇಕು. ಗೊಬ್ಬರದ ಹುಳ, ಚೇರಟೆ ಹಾಗೂ ಇನ್ನಿತರ ಜೀವಿಗಳು ಇದ್ದಲ್ಲಿ ಅವನ್ನೂ ಹೊರತೆಗೆಯಬೇಕು.

**ಪ್ರೈಮರಿ ಡಿಕಂಪೋಸಿಷನ್–ಮುಖ್ಯವಾದ ಒಂದನೇ ಘಟ್ಟ :**

3:10ರ ಪ್ರಮಾಣದಲ್ಲಿ ಗೊಬ್ಬರದ ಹುಡಿ ಮತ್ತು ತ್ಯಾಜ್ಯವಸ್ತುಗಳನ್ನು ತೆಗೆದುಕೊಂಡು ಸರಿಯಾಗಿ ಮಗುಚಬೇಕು. ಒಟ್ಟಿಗೆ ಸ್ವಲ್ಪ ನೀರನ್ನು ಆಗಾಗ ಚಿಮುಕಿಸಿಕೊಳ್ಳಬೇಕು (ಕೆಂಪು ಮಣ್ಣಿನ ಹುಡಿಯನ್ನು ಕೆಲವು ತರದ ಎರೆಹುಳುಗಳು ತಿನ್ನುವುದಿಲ್ಲ. ಆದ್ದರಿಂದ ಮಣ್ಣನ್ನು ಸೇರಿಸುವುದು ಬೇಡ)

3. ಈ ರೀತಿಯಾಗಿ ಮಿಶ್ರಣ ಮಾಡಿದ ವಸ್ತುಗಳನ್ನು, ಘಟಕದ ಒಂದು ತೊಟ್ಟಿಯಲ್ಲಿ ತುಂಬಿ ಅನಂತರ 3 ವಾರದವರೆಗೆ ಅದನ್ನು ಕೊಳೆಯಲು ಬಿಡಬೇಕು. ಈ ಅವಧಿಯಲ್ಲಿ ಕನಿಷ್ಠ 10 ಬಾರಿಯಾದರೂ ಅವುಗಳನ್ನು ತಿರುವಿ ಹಾಕಬೇಕು. ಹಾಗೂ ಪ್ರತಿದಿನವೂ ನೀರನ್ನು ಸಿಂಪಡಿಸಬೇಕು. ಈ ರೀತಿ ಮಾಡುವುದರಿಂದ ಅವುಗಳು ಮಿಶ್ರಣಗೊಂಡು ಚೆನ್ನಾಗಿ ಕೊಳೆಯುವುದು.

**"ಸೆಕೆಂಡರಿ ಡಿಕಂಪೋಸಿಷನ್"– ಮುಖ್ಯವಾದ ಎರಡನೇ ಘಟ್ಟ :**

4. ಮೇಲೆ ಹೇಳಿದಂತೆ ಮಿಶ್ರಣ ಮಾಡಿದ ವಸ್ತುಗಳು ಮೂರು ವಾರದ ಕಾಲ ಚೆನ್ನಾಗಿ ಕೊಳೆಯುತ್ತವೆ. ಈಗ ಸುಮಾರು 200 ಹುಳ (½ kg)ಗಳಷ್ಟು ಎರೆಹುಳಗಳನ್ನು ತೊಟ್ಟಿಯ ಒಂದನೇ ಭಾಗದಲ್ಲಿ ಬಿಡಿರಿ. ಕೆಲವೇ ನಿಮಿಷದಲ್ಲಿ ಎರೆಹುಳಗಳು ಅಡಿಭಾಗದಿಂದ ತ್ಯಾಜ್ಯವನ್ನು ತಿನ್ನಲು ಪ್ರಾರಂಭಿಸುವವು.

5. ಎರೆಹುಳುಗಳನ್ನು ಮೊದಲನೆಯ ತೊಟ್ಟಿಗೆ ಬಿಟ್ಟ ಸಮಯದಲ್ಲಿಯೇ ಖಾಲಿಯಿರುವ ಪಕ್ಕದ ತೊಟ್ಟಿಗೆ 3:10ರ ಪ್ರಮಾಣದಲ್ಲಿ ಗೊಬ್ಬರ ಮತ್ತು ತ್ಯಾಜ್ಯ ವಸ್ತುಗಳ ಮಿಶ್ರಣ (ಮೊದಲೇ ತೊಟ್ಟಿಯ ಹೊರಗೆ ಮಾಡಿಟ್ಟುಕೊಳ್ಳಿ)ವನ್ನು ತುಂಬಿಸಬಹುದು.

6. ಗೊಬ್ಬರ ಘಟಕದಲ್ಲಿ ಶೇಕಡಾ 40-50 ರಷ್ಟು ತೇವಾಂಶವನ್ನು ಕಾಪಾಡಲು ನೀರನ್ನು ಸಿಂಪಡಿಸುತ್ತಾ ವಾರಕ್ಕೊಮ್ಮೆ ಯಾದರೂ ತ್ಯಾಜ್ಯವನ್ನು ಮಗುಚಬೇಕು.

7. ಈ ಸಂದರ್ಭದಲ್ಲಿ ಎರೆಹುಳುಗಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಇರುವೆಗಳು ಹೆಗ್ಗಣ, ಇಲಿ ಹಾಗೂ ಗೆದ್ದಲುಗಳು

ಎರೆಹುಳಗಳಿಗೆ ತೊಂದರೆಯುಂಟು ಮಾಡುವವು. ಇರುವೆಗಳನ್ನು ದೂರವಿರಿಸಲು ಘಟಕದ ಹೊರಗೆ ಚಿತ್ರದಲ್ಲಿ ಕಾಣಿಸಿದಂತೆ ನೀರಿರುವ ತಟ್ಟನ್ನು ನಿರ್ಮಿಸಬೇಕು. ಹೆಗ್ಗಣ, ಇಲಿಗಳು ಬರದಂತೆ ಮುಚ್ಚಳ ಸದಾ ಹಾಕಿರಬೇಕು.

8. ಎರೆಹುಳುಗಳನ್ನು ಬಿಟ್ಟ 8-10 ದಿನಗಳ ನಂತರ ಮೇಲ್ಭಾಗದಲ್ಲಿ ಹಿಕ್ಕೆ (ಮಲ) ಬರಲಾರಂಭಿಸುತ್ತದೆ. ಈ ಸಂದರ್ಭದಲ್ಲಿ ತ್ಯಾಜ್ಯ ವಸ್ತುಗಳು ತೊಟ್ಟಿಯಲ್ಲಿ ನಿಧಾನವಾಗಿ ಜಗ್ಗಿಕೊಂಡು ಸುಮಾರು ಅರ್ಧಾಂಶಕ್ಕೆ ಬರುತ್ತದೆ. ಅಂತಹ ತ್ಯಾಜ್ಯವಸ್ತುಗಳು ಕಪ್ಪಾಗಿದ್ದು ಮೃದುವಾದ ವಾಸನೆರಹಿತವಾದ ಎರೆಗೊಬ್ಬರವಾಗಿ ಬದಲಾವಣೆ ಹೊಂದಿ ಉಪಯೋಗಿಸುವರೆ ತಯಾರಾಗಿರುತ್ತದೆ.

**ಎರೆಗೊಬ್ಬರವನ್ನು ಸಂಗ್ರಹಿಸುವ ವಿಧಾನ :**

1. ಮೊದಲನೆಯ ತೊಟ್ಟಿಯಲ್ಲಿ ಇರುವ ಕಪ್ಪಾದ ಎರೆಗೊಬ್ಬರವನ್ನು ಹೊರತೆಗೆದು ರಾಶಿ ಮಾಡಿ (ಚಿತ್ರದಲ್ಲಿ ತೋರಿಸಿದಂತೆ ಗುಡ್ಡೆಯಾಕಾರದಲ್ಲಿ) 1-2 ಗಂಟೆಗಳ ಕಾಲ ಅದರಷ್ಟಕ್ಕೆ ಬಿಡಿರಿ. ಹೀಗೆ ಗುಡ್ಡೆಯಾಕಾರ ಮಾಡಿರುವುದರಿಂದ ಹೆಚ್ಚಿನ ಹುಳುಗಳು ಗುಡ್ಡೆಯ ತಳಭಾಗದ ಕಡೆಗೆ ಬಂದು ಸೇರುವುದು. ಮೇಲಿನ ಭಾಗದ ಗೊಬ್ಬರವನ್ನು ಸಂಗ್ರಹಿಸಬಹುದು. ಇದೇ ತರಹದ ಕ್ರಮವನ್ನು 2, 3 ಸಲ ಪುನರಾವರ್ತನೆ ಮಾಡಿರಿ.

**ಮುಖ್ಯವಾಗಿ ಗಮನಿಸಲೇಬೇಕಾದ ಅಂಶಗಳು :**

1. ಇರುವೆಗಳು, ಹೆಗ್ಗಣ, ಇಲಿ, ಗೆದ್ದಲುಗಳು, ಎರೆಹುಳ ಗೊಬ್ಬರ ತಯಾರಿಕೆಗೆ ತೊಂದರೆಯುಂಟು ಮಾಡುವುವು.

2. ಇರುವೆ ಹಾಗೂ ಗೆದ್ದಲುಗಳಿಂದ ಎರೆಹುಳುಗಳನ್ನು ರಕ್ಷಿಸಲು ತೊಟ್ಟಿಯ ಸುತ್ತಲೂ ನೀರು ನಿಲ್ಲುವಂತೆ ಮಾಡಬೇಕು. ಎಂದೂ ನೀರು ಬತ್ತಿಹೋಗದಂತೆ ನೋಡಿಕೊಳ್ಳಬೇಕು. ನೀರು ಬತ್ತಿ ಹೋದರೆ, ಇರುವೆಗಳು ಬರುವ ಸಂದರ್ಭ ಇರುತ್ತದೆ.

3. ಒಂದುವೇಳೆ ಗೊಬ್ಬರದ ಮೇಲೆ ಇರುವೆ ಬಂದಿದ್ದರೆ, ಲಾಂಟಾನ ಸೊಪ್ಪನ್ನು ಅದರ ಮೇಲೆ ಹರಡಿದಾಗ ಇರುವೆಗಳು ತನ್ನಿಂದ ತಾನೇ ಹೊರ ಓಡುವುವು. ಬೆಳ್ಳಿಗೆ ಅಕ್ಕಿಕಾಳನ್ನು ಚೆಲ್ಲುವುದರಿಂದ, ಅರಿಶಿನ ಅಥವಾ ಹಸಿರು ಲಾಂಟಾನ ಸೊಪ್ಪನ್ನು ಮೇಲೆ ಹರಡುವುದರಿಂದ ಇರುವೆಗಳನ್ನು ಹೊರದೂಡಬಹುದು. DDTಯನ್ನು ಉಪಯೋಗಿಸಬೇಡಿ.

4. ತಂತಿಯ ಜಾಲಿಗಳನ್ನು ತೊಟ್ಟಿಯ ಮೇಲೆ ಹರಡುವುದರಿಂದ ಇಲಿ, ಹೆಗ್ಗಣಗಳನ್ನು ದೂರವಿರಿಸಬಹುದು.

5. ಎರೆಹುಳು ತೊಟ್ಟಿಯಲ್ಲಿ ಸುಮಾರು ಶೇಕಡಾ 40ರಿಂದ 50ರಷ್ಟು ತೇವಾಂಶವಿರುವಂತೆ ನೋಡಿಕೊಳ್ಳುವುದು ಅತೀ ಅಗತ್ಯವಾಗಿದೆ. ತೇವಾಂಶ ಹೆಚ್ಚಾದರೂ ಕೂಡಾ ತೊಂದರೆಯಾಗುತ್ತದೆ.

6. ತೊಟ್ಟಿಯನ್ನು ಸದಾ ನೆರಳಿನಲ್ಲಿ ಇರುವಂತೆ ನೋಡಿಕೊಳ್ಳಬೇಕು.

**ಎರೆಗೊಬ್ಬರದಲ್ಲಿರುವ ವಿವಿಧ ಪೋಷಕಾಂಶಗಳು :**

1. ಸಾವಯವ ಇಂಗಾಲ 9.15ರಿಂದ 17.98 ಪ್ರತಿಶತ
2. ಸಾರಜನಕ 0.5ರಿಂದ 1.5 ಪ್ರತಿಶತ
3. ರಂಜಕ (ದೊರೆಯುವ) 0.1ರಿಂದ 1.3ಪ್ರತಿಶತ ಪೊಟ್ಯಾಷ್ (ದೊರೆಯುವ) 0.15ರಿಂದ 1.3 ಪ್ರತಿಶತ
4. ಸೋಡಿಯಂ 0.06ರಿಂದ 0.3 ಪ್ರತಿಶತ
5. ಕ್ಯಾಲ್ಸಿಯಂ ಮತ್ತು ಮ್ಯಾಗ್ನೇಸಿಯಂ 22.67ರಿಂದ 70 ಮಿಲಿ ಇಕ್ವಲಂಟ್/ 100 ಗ್ರಾಂಗೆ
6. ತ್ರಾಮ 2.00ರಿಂದ 9.5 ಪಿ.ಎಂ.
7. ಕಬ್ಬಿಣ 2.00ರಿಂದ 9.3 ಪಿ.ಪಿ.ಎಂ.
8. ಸತುವು 5.7ರಿಂದ 11.5 ಪಿ.ಪಿ.ಎಂ.
9. ಗಂಧಕ 128.0ರಿಂದ 548.0 ಪಿ.ಪಿ.ಎಂ.

**ಎರೆಗೊಬ್ಬರವನ್ನು ಬಳಸುವ ರೀತಿ**

**ಎರೆಗೊಬ್ಬರವನ್ನು ಬೆಳೆಗಳಿಗೆ ವಿವಿಧ ರೀತಿಯಲ್ಲಿ ಕೊಡಬಹುದಾಗಿದೆ.**

1. **ಹೂವಿನ (ಮತ್ತು ಕೈತೋಟದ ಕುಂಡದ) ಸಸಿಗಳಿಗೆ :**

ಸಸಿಗಳ ಸುತ್ತಲೂ ಸುಮಾರು 3ರಿಂದ 4 ಇಂಚು ಆಳವಾಗಿ ಮಣ್ಣು ತೆಗೆದು ಎರೆಗೊಬ್ಬರ ಹಾಕಿ ಮಣ್ಣು ಮುಚ್ಚಿ ನೀರು ಹಾಕಬೇಕು. ಹೀಗೆ ವರ್ಷದಲ್ಲಿ 2ರಿಂದ 3 ಬಾರಿ ಎರೆಗೊಬ್ಬರ ಹಾಕಬೇಕು. ಕುಂಡಗಳಲ್ಲಿ ಸಸಿ ನೆಡಲು ತಯಾರಿಸುವ ಮಣ್ಣಿಗೆ 3:2:1 C ಅನುಪಾತದಲ್ಲಿ ಕೆಂಪು ಮಣ್ಣು, ಎರೆಗೊಬ್ಬರ ಮತ್ತು ಮರಳನ್ನು ಅನುಕ್ರಮವಾಗಿ ಬೆರೆಸಿ, ಸಸಿ ನೆಡಬೇಕು.

2. **ತೋಟಗಾರಿಕಾ ಬೆಳೆಗಳಿಗೆ (ಹಣ್ಣು/ಪ್ಲಾಂಟೇಶನ್) :**

ತೋಟಗಾರಿಕಾ ಬೆಳೆಗಳಲ್ಲಿ ಎರೆಗೊಬ್ಬರ ಬಳಕೆ (ಬಹು ಸುಲಭ ಹಾಗೂ) ಗಿಡಗಳ ವಯಸ್ಸಿಗನುಗುಣವಾಗಿ ಹಾಕಬೇಕಾಗುತ್ತದೆ.

ಗಿಡಗಳ ಸುತ್ತಲೂ ½ದಿಂದ 1 ಅಡಿ ಆಳದ ಮತ್ತು 1ರಿಂದ 2 ಅಡಿ ಅಗಲವಾಗಿ ಮಣ್ಣನ್ನು ತೆಗೆದು (ಬೇರುಗಳಿಗೆ ಧಕ್ಕೆಯಾಗದಂತೆ ಅಗೆದು) ಎರೆಗೊಬ್ಬರ ಹಾಕಿ ಮತ್ತೆ ಮಣ್ಣನ್ನು ಮುಚ್ಚಬೇಕು. ಈ ಪದ್ಧತಿಯನ್ನು ಪಾಲಿಸುವುದರಿಂದ ಪೋಷಕಾಂಶಗಳ ಸೋರಿಕೆ ತಡೆಯುವುದಲ್ಲದೇ ಎರೆಗೊಬ್ಬರದಲ್ಲಿರುವ ಮರಿಹುಳುಗಳು/ಕೋಶಗಳು ಬೆಳೆಯಲು ಅನುವಾಗುತ್ತದೆ.

ವರ್ಷದಲ್ಲಿ 2 ಬಾರಿ ಹಣ್ಣಿನ ಬೆಳೆಗಳಿಗೆ ಈ ರೀತಿಯಾಗಿ ಎರೆಗೊಬ್ಬರವನ್ನು ಪ್ರತೀ ಹೆಕ್ಟೇರಿಗೆ ಸುಮಾರು 2.5 ಟನ್‌ನಂತೆ ಕೊಡಬೇಕು.

ಈ ಪದ್ಧತಿಯಲ್ಲಿ ಕೈತೋಟದ ಹಣ್ಣಿನ ಗಿಡಗಳಿಗೆ ಮತ್ತು ಹೂವಿನ/ತರಕಾರಿ (ವಾರ್ಷಿಕ) ಬೆಳೆಗಳಿಗೂ ಎರೆಗೊಬ್ಬರ ಕೊಡಬಹುದು.

3. **ಹೊಲದ ಬೆಳೆಗಳಿಗೆ/ಎರೆಗೊಬ್ಬರ :**

ಹೊಲದ ಬೆಳೆಗಳಲ್ಲಿ ಎರೆಗೊಬ್ಬರವನ್ನು ಕೊಡುವುದು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿದ್ದು ಈ ಕೆಳಗೆ ತಿಳಿಸಿದ ಪದ್ಧತಿಗಳಲ್ಲಿ ಕೊಡಬಹುದಾಗಿದೆ.

1. ಎಕರೆಗೆ 10 ಕ್ವಿಂಟಾಲ್ ಎರೆಗೊಬ್ಬರವನ್ನು ಬಿತ್ತನೆಗೆ ಮುಂಚೆ ಹಾಕಬಹುದು.

2. ಬಿತ್ತನೆಯಾದ ನಂತರ ಬೆಳೆಗಳ ಎರಡು ಸಾಲುಗಳ ಮಧ್ಯ ಎರೆಗೊಬ್ಬರವನ್ನು ಎರಚುವುದರಿಂದ ಗೊಬ್ಬರ ಮಣ್ಣಿನಲ್ಲಿ ಬೆರೆತು ಬೆಳೆಗೆ ಸಿಗುತ್ತದೆ.

3. ಹೆಚ್ಚು ಅಂತರ (ಹತ್ತಿ, ಹಣ್ಣಿನ ಬೆಳೆಗಳು) ಇರುವ ಬೆಳೆಗಳಲ್ಲಿ ಗಿಡಗಳ ಸುತ್ತಲೂ ಅರ್ಧಚಂದ್ರಾಕಾರವಾಗಿ ಮಣ್ಣನ್ನು ಅಗೆದು ಎರೆಗೊಬ್ಬರ ಕೊಡಬಹುದು.

**ವಿವಿಧ ಬೆಳೆಗಳಿಗೆ ಬೇಕಾಗುವ ಎರೆಗೊಬ್ಬರದ ಪ್ರಮಾಣ :**

ಬೇರೆ ಬೇರೆ ಬೆಳೆಗಳಿಗೆ ಪ್ರತೀ ಋತುವಿಗೆ ಬೇಕಾಗುವ ಎರೆಗೊಬ್ಬರ ಪ್ರಮಾಣ ಹೀಗಿದೆ.

1. ಭತ್ತ/ಗೋಧಿ, ಮೆಕ್ಕೆಜೋಳ, ಸಜ್ಜೆ, ಮುಸುಕಿನ ಜೋಳ ಇತ್ಯಾದಿ–1000 ಕೆ.ಜಿ. ಪ್ರತಿ ಎಕರೆಗೆ
2. ಹತ್ತಿ/ಸೂರ್ಯಕಾಂತಿ–1500 ಕೆ.ಜಿ. ಪ್ರತಿ ಎಕರೆಗೆ
3. ನೆಲಗಡಲೆ, ತೊಗರಿಬೇಳೆ, ಸಾಸಿವೆ ಹಾಗೂ ಇತರ ಖಾದ್ಯ ಹಾಗೂ ಬೆಳೆಗಳು–1000 ಕೆ.ಜಿ. ಪ್ರತಿ ಎಕರೆಗೆ
4. ಕಬ್ಬು–2000 ಕೆ.ಜಿ. ಪ್ರತಿ ಎಕರೆಗೆ
5. ಬಟಾಟೆ, ಗೆಣಸು, ಟೊಮೆಟೊ, ಬದನೆ, ಕ್ಯಾರೆಟ್, ಹೂಕೋಸು, ಎಲೆಕೋಸು, ನೀರುಳ್ಳಿ, ಬೆಂಡೆ ಮತ್ತು ಇತರ ತರಕಾರಿಗಳು–750 ಕೆ.ಜಿ. ಪ್ರತಿ ಎಕರೆಗೆ
6. ತೆಂಗು–8-10 ಕೆ.ಜಿ. (5 ವರ್ಷಗಳಿಗಿಂತ ಹೆಚ್ಚಿನವುಗಳಿಗಾಗಿ)
7. ನಿಂಬೆ, ನೇರಳೆ, ದಾಳಿಂಬೆ, -6-8 ಕೆ.ಜಿ. (5 ವರ್ಷಗಳಿಗಿಂತ ಹೆಚ್ಚಿನವುಗಳಿಗಾಗಿ)
8. ಗುಲಾಬಿ, ಮಲ್ಲಿಗೆ– 2ರಿಂದ 3 ಕೆ.ಜಿ. ಪ್ರತಿ ಗಿಡಕ್ಕೆ
9. ಪಾಟ್‌ನಲ್ಲಿರುವ ಸಸಿಗಳು–250 ಗ್ರಾಂ ಪ್ರತಿ ಪಾಟ್
10. ದ್ರಾಕ್ಷಿ, ಅನನಾಸು ಬಾಳೆ-1500-2000 ಕೆ.ಜಿ. ಪ್ರತಿ ಎಕರೆಗೆ

**ಎರೆಹುಳ ಗೊಬ್ಬರದ ಪ್ರಯೋಜನಗಳು :**

4. **ವಾತಾವರಣದಲ್ಲಿ ಎರೆಗೊಬ್ಬರದ ಪಾತ್ರ:**

1. ತ್ಯಾಜ್ಯವಸ್ತುಗಳನ್ನು ಗೊಬ್ಬರವಾಗಿ ಪರಿವರ್ತಿಸುವುದರಿಂದ ವಾತಾವರಣದ ಕಲ್ಮಷವು ಕಡಿಮೆಯಾಗುವುದು.
2. ಎರೆಗೊಬ್ಬರವನ್ನು ಉಪಯೋಗಿಸುವುದರಿಂದ ವಿಷಯುಕ್ತವಾದ ಕೃತಕ ಗೊಬ್ಬರದ ಉಪಯೋಗ ರೈತರಲ್ಲಿ ಕಡಿಮೆಯಾಗಿ ಮಣ್ಣಿನ ಸಾರದ ಸಂರಕ್ಷಣೆಯಾಗುವುದು.
3. ಎರೆಹುಳಗಳು ಗದ್ದೆಯ ಮಣ್ಣನ್ನು ತಿಂದು ಹೊರಹಾಕುವುದರಿಂದ, ಗದ್ದೆಯನ್ನು ಉತ್ತಂತ್ತಾಗಿ ರೈತನ ಉಳುವ ಕೆಲಸ ಸುಲಭವಾಗುವುದು. ಕೃಷಿಯ ಖರ್ಚು ಕಡಿಮೆಯಾಗುವುದು.

5. **ಕೃಷಿಯಲ್ಲಿ ಎರೆಗೊಬ್ಬರದ ಪಾತ್ರ :**

a. ಎರೆಗೊಬ್ಬರವು ನೆಲದ ಸಾರವನ್ನು ಹೆಚ್ಚಿಸುವುದು.
b. ಎರೆಗೊಬ್ಬರ ಹುಳಗಳು ಮಣ್ಣಿನಲ್ಲಿ ಆಮ್ಲಜನಕದ ಅಂಶವನ್ನು ಹೆಚ್ಚಿಸುವುದು.
c. ಎರೆಗೊಬ್ಬರವನ್ನು ಕೃಷಿಯುಲ್ಲಿ ಉಪಯೋಗಿಸುವುದರಿಂದ ಕೃಷಿ ಉತ್ಪನ್ನಗಳು ರುಚಿಕರವಾಗಿದ್ದು ಉತ್ತಮ ತರದ್ದಾಗಿರುತ್ತದೆ.

6) **ಎರೆಗೊಬ್ಬರ ತಯಾರಿ ಮತ್ತು ಉದ್ಯೋಗಾವಕಾಶಗಳು :**

1. ಎರೆಹುಳ ಗೊಬ್ಬರವನ್ನು ತಯಾರಿಸುವ ವಿಧಾನವು ಅತೀ ಸರಳವಾಗಿದೆ ಮತ್ತು ಸ್ವಲ್ಪ ಬಂಡವಾಳದೊಂದಿಗೆ ಹಳ್ಳಿಗಳಲ್ಲಿ ಕೂಡ ಕೈಗೆತ್ತಿಕೊಳ್ಳಬಹುದಾದ ಒಂದು ಸ್ವ ಉದ್ಯೋಗವಾಗಿದೆ.

2. ಎರೆಹುಳ ಗೊಬ್ಬರ ತಯಾರಿಕೆಯ ವಿಧಾನವು ಹಳ್ಳಿಗಳಲ್ಲಿ ಹೆಂಗಸರಿಗೆ, ನಿರುದ್ಯೋಗಿ ಯುವಕರಿಗೆ ಅತ್ಯಲ್ಪ ಬಂಡವಾಳದೊಂದಿಗೆ ಸಾಕಷ್ಟು ಹಣ ಸಂಪಾದನೆಯನ್ನು ಮಾಡುವ ಒಂದು ಮಾರ್ಗವಾಗಿದೆ.

**ಎರೆಹುಳ ಗೊಬ್ಬರ ವಿಧಾನದಿಂದ**

***ಕಸದಿಂದ ರಸ ಪಡೆಯಿರಿ***
***ಕಲ್ಮಷದಿಂದ ಕನಕ ಪಡೆಯಿರಿ***
***ವ್ಯರ್ಥದಿಂದ ಅರ್ಥ ಗಳಿಸಿರಿ***
***ನಿರರ್ಥಕದಿಂದ ಸಾರ್ಥಕತೆ ಪಡೆಯಿರಿ.***


## ವಧೂವರರ ವಿವಾಹ ವೇದಿಕೆ

**ನಮ್ಮ ಸಮಾಜ ಬಾಂಧವರ ಗಮನಕ್ಕೆ–**

ವಧೂವರರ ವಿವಾಹ ವೇದಿಕೆಯನ್ನು ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಪ್ರಾರಂಭಿಸಿ, ಇದರ ಉಪಯುಕ್ತತೆಯನ್ನು ನಮ್ಮ ಸಮಾಜ ಬಾಂಧವರು ಪಡೆದುಕೊಂಡಿದ್ದಾರೆ. ಇನ್ನು ಮುಂದೆಯೂ ಈ ವೇದಿಕೆಯ ಸದುಪಯೋಗ ಪಡೆದುಕೊಳ್ಳಬಹುದು.



***ಸಂಪರ್ಕಿಸಿರಿ :***

| | | |
|---|---|---|
| ಶ್ರೀ ಚೇತನ್ ಶರ್ಮ | : | 9844187083 |
| ಶ್ರೀ ಎನ್. ಶಶಿಕಾಂತ್ | : | 9341988753 |
| ಶ್ರೀಮತಿ ವೈಜಯಂತಿ ರಾವ್ ಬೆಳ್ಳೆ | : | 9242204848 |

E-mail : gbism@gmail.com

**ಒಂದು ವಿಜ್ಞಾಪನೆ :** ಪತ್ರಿಕೆಯ ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದ ಸಮಾಜ ಬಾಂಧವರು ಉದಾರ ಧನಸಹಾಯವನ್ನು ಹಾಗೂ ಜಾಹೀರಾತುಗಳನ್ನು ನೀಡಿ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

**ಜಾಹೀರಾತು ದರ**

| | | |
|---|---|---|
| 1. 6 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) | - | ರೂ. 600/- |
| 2. 12 ಸಂಚಿಕೆಗಳು (ನಿರ್ದಿಷ್ಟ ಸ್ಥಳಾವಕಾಶ) | - | ರೂ. 1000/- |
| 3. ಶುಭಾಶಯಗಳು | - | ರೂ. 100/- |

# ಲಯನ್ಸ್ ಕ್ಲಬ್ ಮತ್ತು ಲಯನೆಸ್ ಕ್ಲಬ್, ಮಂಗಳೂರು ಇವರಿಂದ ಕೊಡುಗೆ



ಲಯನ್ಸ್ ಕ್ಲಬ್ ಮತ್ತು ಲಯನೆಸ್ ಕ್ಲಬ್, ಮಂಗಳೂರು ಇವರು ಬಳ್ಪ ಶ್ರೀ ತ್ರಿಶೂಲಿನಿ ದುರ್ಗಾಪರಮೇಶ್ವರೀ ದೇವಸ್ಥಾನಕ್ಕೆ 150 ಸ್ಟೀಲ್ ಬಟ್ಟಲುಗಳನ್ನು ಭಕ್ತಾದಿಗಳ ಉಪಯೋಗಕ್ಕಾಗಿ ಉದಾರವಾಗಿ ನೀಡಿರುತ್ತಾರೆ. ಕ್ಲಬ್‌ನ ಅಧ್ಯಕ್ಷ ಡಾ. ಅರವಿಂದ ರಾವ್ ಕೇದಿಗೆ, ಕಾರ್ಯದರ್ಶಿ ಲ. ನಾಗರಾಜ ಶರ್ಮ, ಖಜಾಂಜಿ ಲ. ರಘುವೀರ ರಾವ್, ಶ್ರೀಮತಿ ಗಾಯತ್ರಿ ಅರವಿಂದ ರಾವ್ ಇವರುಗಳು ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಖಜಾಂಜಿ ಶ್ರೀ ಕರುಣ್ ರಾವ್ ಬೆಳ್ಳೆಯವರ ಉಪಸ್ಥಿತಿಯಲ್ಲಿ ಬಟ್ಟಲುಗಳನ್ನು ನೀಡಿ ಶ್ರೀದೇವಿಯ ಪ್ರಸಾದವನ್ನು ಸ್ವೀಕರಿಸಿದರು.

## ಶ್ರೀ ಸುಬ್ರಹ್ಮಣ್ಯ ಸಭಾ (ರಿ.), ಮಂಗಳೂರು

ಸಮಾಜ ಬಾಂಧವರೇ,

ಯಶಸ್ವಿ 2ನೇ ವರುಷದಲ್ಲಿ ಸಾಗುತ್ತಿರುವ 'ಜ್ಞಾನಶಕ್ತಿ' ಮಾಸ ಪತ್ರಿಕೆಯನ್ನು ಸದಾಕಾಲ ನಿಮಗೆ ನೀಡುವ ಉದ್ದೇಶದಿಂದ ಪತ್ರಿಕೆಗೆ ಈ ಕೆಳಗಿನಂತೆ ಚಂದಾದರವನ್ನು ನಿಗದಿಪಡಿಸಲಾಗಿದೆ.



| | | |
|---|---|---|
| **ಮಹಾ ಪೋಷಕರು** | – | **ರೂ. 10,000/–** |
| **ಪೋಷಕರು** | – | **ರೂ. 5,000/–** |
| **ಆಜೀವ ಚಂದಾ ದರ** | – | **ರೂ. 500/–** |
| **ವಾರ್ಷಿಕ ಚಂದಾ ದರ** | – | **ರೂ. 100/–** |

**ಹೆಚ್ಚಿನ ಮಾಹಿತಿಗಾಗಿ**

**ಶ್ರೀ ಪಿ. ಶ್ರೀಕಾಂತ ರಾವ್** **9343361618**

**ಶ್ರೀ ಅನಿಲ್ ರಾವ್ ಬಿ. ಎಸ್.** **9880037110**

ಸಮಾಜ ಬಾಂಧವರು ತಮ್ಮ ಚಂದಾದರವನ್ನು ಆದಷ್ಟು ಶೀಘ್ರ ನೀಡಿ ಹಾಗೂ ಪರ ಊರಿನ ಸಮಾಜ ಬಾಂಧವರನ್ನು ಚಂದಾದಾರರಾಗಲು ಪ್ರೇರೇಪಿಸಿ ಸಹಕರಿಸಬೇಕಾಗಿ ವಿನಂತಿ. ಚೆಕ್ ಅಥವಾ ಡಿ.ಡಿ. ನೀಡುವವರು "ಜ್ಞಾನಶಕ್ತಿ" ಹೆಸರಿನ ಮೂಲಕ ಶ್ರೀ ಸಭಾಕ್ಕೆ ಕಳುಹಿಸಿಕೊಡಬಹುದು.

# ಅಪಾರ ಕೀರ್ತಿ ಗಳಿಸಿ...



ಶ್ರೀ ಸುಬ್ರಹ್ಮಣ್ಯ ಸಭಾದ ನಿರ್ದೇಶಕರಾಗಿರುವ ಶ್ರೀ ಟಿ. ಬಿ. ಮೋಹನ್ ರಾವ್ ಇವರ ಸುಪುತ್ರಿ ಕು। ಮೇಘ ಟಿ. ಇವಳು ಮಂಗಳೂರಿನ ಫಾದರ್ ಮುಲ್ಲರ್ಸ್ ಮೆಡಿಕಲ್ ಕಾಲೇಜಿನಲ್ಲಿ MBBS ಪದವಿಯನ್ನು ಪಡೆದು, ಸ್ನಾತಕೋತ್ತರ ಪದವಿಗಾಗಿ SDM ಮೆಡಿಕಲ್ ಕಾಲೇಜು ಧಾರವಾಡದಲ್ಲಿ ಸೀಟು ಪಡೆದಿರುತ್ತಾಳೆ. ಇವಳು MD (ಅನಸ್ತೇಷಿಯ) ವಿಭಾಗದಲ್ಲಿ ಮುಂದಿನ 3 ವರ್ಷ ಅಭ್ಯಾಸ ಮಾಡಲಿದ್ದಾಳೆ.

*****



ಪ್ರಜ್ಞಾ ಎಜುಕೇಶನ್ ಟ್ರಸ್ಟ್ (ರಿ.), ಸುಳ್ಯ ಇವರು ನಡೆಸಿದ "ಸದಾ ಸಿದ್ಧರಾಗಿರೋಣ" ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಸುಮಶ್ರೀ ಇವರು 8ನೇ ತರಗತಿಯ ರಾಜ್ಯಮಟ್ಟದ ಪ್ರಜ್ಞಾ ವಿಶೇಷ ಸಾಧಕ ಪ್ರಶಸ್ತಿ ಪಡೆದಿದ್ದಾರೆ. ಇವರು ಲೇಡಿಹಿಲ್ ವಿಕ್ಟೋರಿಯಾ ಹೆಮ್ಮಕ್ಕಳ ಶಾಲೆಯ ವಿದ್ಯಾರ್ಥಿನಿಯಾಗಿದ್ದು ಮಂಗಳೂರಿನ ಶ್ರೀ ಸುರೇಶ್ ಮತ್ತು ಶ್ರೀಮತಿ ಮಮತಾರ ಪುತ್ರಿಯಾಗಿರುತ್ತಾರೆ.

*****



ಈ ಬಾರಿ ನಡೆದ ಎಸ್.ಎಸ್.ಎಲ್.ಸಿ. (ಸಿ.ಬಿ.ಎಸ್.ಸಿ.) ಪರೀಕ್ಷೆಯಲ್ಲಿ ಶ್ರೇಯಾಳು 9.8 ಗ್ರೇಡ್ ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಶ್ರೀ ಕೆ. ಪಿ. ಶ್ರೀಕಾಂತ್ ರಾವ್ ಮತ್ತು ಶ್ರೀಮತಿ ವಿದ್ಯಾರವರ ಸುಪುತ್ರಿಯಾದ ಇವಳು ಮಂಗಳೂರಿನ ಶಾರದಾ ವಿದ್ಯಾಲಯದ ವಿದ್ಯಾರ್ಥಿನಿ.

*****



ಈ ಬಾರಿ ನಡೆದ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪ್ರಕೃತಿ ರಾವ್ ಶೇಕಡಾ 91 ಅಂಕ ಪಡೆದು ಉನ್ನತಶ್ರೇಣಿಯಲ್ಲಿ ತೇರ್ಗಡೆ ಹೊಂದಿರುತ್ತಾಳೆ. ಶ್ರೀ ನಾಗರಾಜ್ ರಾವ್ ಟಿ. ಮತ್ತು ಶ್ರೀಮತಿ ಚಂದ್ರಿಕಾರವರ ಸುಪುತ್ರಿಯಾದ ಇವಳು ಮಂಗಳೂರಿನ ರಾಮಕೃಷ್ಣ ಹೈಸ್ಕೂಲ್ ವಿದ್ಯಾರ್ಥಿನಿ.

# ಶ್ರೀ ಇನ್ನಪದವು ನಾಗರಾಜ ರಾವ್‌ರವರು ಜನರಲ್ ಮೆನೇಜರ್ ಆಗಿ ಭಡ್ತಿ



ಉಡುಪಿಯಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ಡೆಪ್ಯುಟಿ ಜನರಲ್ ಮೆನೇಜರ್ ಆಗಿದ್ದ ಶ್ರೀ ಐ. ಪಿ. ನಾಗರಾಜರಾಯರು ಜನರಲ್ ಮೆನೇಜರ್ ಆಗಿ ಭಡ್ತಿ ಹೊಂದಿ ಬೆಂಗಳೂರಿನ ಸಿಂಡಿಕೇಟ್ ಬ್ಯಾಂಕ್ ಕಾರ್ಪೋರೇಟ್ ಕಛೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಬಿ. ಕಾಂ., ಸಿ. ಎ. ಪದವೀಧರರಾಗಿದ್ದ ನಾಗರಾಜರಾಯರು ಮಣಿಪಾಲ ಸಿಂಡಿಕೇಟ್ ಬ್ಯಾಂಕಿಗೆ 1985ರಲ್ಲಿ ಅಧಿಕಾರಿಯಾಗಿ ಸೇರ್ಪಡೆಗೊಂಡಿದ್ದು ಕಳೆದ 28 ವರ್ಷಗಳಲ್ಲಿ ಮಣಿಪಾಲ, ಉಡುಪಿ, ಬೆಂಗಳೂರು, ದೆಹಲಿ, ಆಗ್ರಾಗಳಲ್ಲಿ ಸೇವೆ ಸಲ್ಲಿಸಿ ಪುನಃ ಉಡುಪಿಗೆ ಬಂದಿದ್ದು, ಆಗ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘದ ಪದಾಧಿಕಾರಿಯಾಗಿದ್ದು ಸೇವೆ ಸಲ್ಲಿಸುತ್ತಿದ್ದರು. ಈಗ ಬೆಂಗಳೂರಿಗೆ ವರ್ಗಾವಣೆ ಹೊಂದಿ ಅಲ್ಲೇ ಭಡ್ತಿ ಹೊಂದಿದ್ದಾರೆ.

# ಚಿಣ್ಣರ ಆರ್ಟ್ ಗ್ಯಾಲರಿ



***ಶುಭಶ್ರೀ,*** *4ನೇ ತರಗತಿ*
*ಲೇಡಿಹಿಲ್ ವಿಕ್ಟೋರಿಯಾ ಹೆಮ್ಮಕ್ಕಳ ಶಾಲೆ ಮಂಗಳೂರು*



***ಸುಮಶ್ರೀ,*** *9ನೇ ತರಗತಿ*
*ಲೇಡಿಹಿಲ್ ವಿಕ್ಟೋರಿಯಾ ಹೆಮ್ಮಕ್ಕಳ ಶಾಲೆ, ಮಂಗಳೂರು*



***ಅನುಜ್ಞಾ ರಾವ್,*** *L.K.G.*
*ಶ್ರೀದೇವಿ ನರ್ಸರಿ ಸ್ಕೂಲ್, ಕಿನ್ನಿಗೋಳಿ*



***ಅನಘಾ***
*5ನೇ ತರಗತಿ*
*ಪುತ್ತೂರು*

ಜ್ಞಾನಶಕ್ತಿ **'ಚಿಣ್ಣರ ಆರ್ಟ್ ಗ್ಯಾಲರಿ'**ಗೆ 12 ವರ್ಷದ ಒಳಗಿನ ಮಕ್ಕಳು ತಾವು ರಚಿಸಿದ ರೇಖಾಚಿತ್ರ ಮತ್ತು ಪೈಂಟಿಂಗ್‌ಗಳನ್ನು ಕಳುಹಿಸಬಹುದು. ಇದರೊಂದಿಗೆ ಅವರ ಭಾವಚಿತ್ರ ಕಳುಹಿಸಿದಲ್ಲಿ ಪ್ರಕಟಿಸಲಾಗುವುದು. ಭಾವಚಿತ್ರಗಳನ್ನು ಹಿಂತಿರುಗಿಸಲಾಗುವುದಿಲ್ಲ. **ನಮ್ಮ ವಿಳಾಸ : ಅಂಚೆ ಪೆಟ್ಟಿಗೆ ನಂ. 206, ದರ್ಬೆ–574 202, ಪುತ್ತೂರು, ದ. ಕ.**

# ಚಿಣ್ಣರ ಲೋಕ



**ಚಿತ್ರ 1**



**ಚಿತ್ರ 2**

**ಈ ಮೇಲಿನ ಎರಡು ಚಿತ್ರಗಳಲ್ಲಿರುವ 10 ವ್ಯತ್ಯಾಸಗಳನ್ನು ಗುರುತಿಸಿ.**

## ಡಾ| ಎ. ಪಿ. ಕೃಷ್ಣ ಅವರಿಗೆ ಸಂಶೋಧನಾದತ್ತಿ



ಭಾರತ ಸರಕಾರದ ಪರಮಾಣು ಶಕ್ತಿ ವಿಭಾಗವು ಡಾ. ಎ. ಪಿ. ಕೃಷ್ಣ ಅವರಿಗೆ ರೂಪಾಯಿ ಹನ್ನೆರಡು ಲಕ್ಷ ನಾಲ್ಕು ಸಾವಿರದ ಸಂಶೋಧನಾ ದತ್ತಿಯನ್ನು ಮಂಜೂರು ಮಾಡಿದೆ. ಈ ದತ್ತಿಯನ್ನು "To Investigate the Ameliorative Effect of Lutein against Electron Beam Radiation Induced Oxidative Stress in vitro and in vivo" ಎಂಬ ಯೋಜನೆಗಾಗಿ ಕೊಡಮಾಡಿದೆ. ಡಾ. ಕೃಷ್ಣ ಅವರು ತಮ್ಮ ಈ ಸಂಶೋಧನಾ ಯೋಜನೆಯ ಮೂಲಕ ಕ್ಯಾನ್ಸರ್ ರೋಗದ ಚಿಕಿತ್ಸಾ ಪದ್ಧತಿಯಲ್ಲಿ ಬಳಸುವ ವಿಕಿರಣದ ದುಷ್ಪರಿಣಾಮಗಳನ್ನು ಕಡಿಮೆಗೊಳಿಸುವ ಔಷಧಿಯನ್ನು ಆವಿಷ್ಕರಿಸಲು ಬಳಸುವವರಿದ್ದಾರೆ.

ಡಾ. ಕೃಷ್ಣ ಅವರು ಪ್ರಸ್ತುತ ನಿಟ್ಟೆ ವಿಶ್ವವಿದ್ಯಾಲಯದ ಅಂಗಸಂಸ್ಥೆಯಾಗಿರುವ ಮಂಗಳೂರಿನ ಕೆ.ಎಸ್. ಹೆಗ್ಡೆ ಮೆಡಿಕಲ್ ಅಕಾಡೆಮಿಯ ಶರೀರವಿಜ್ಞಾನಶಾಸ್ತ್ರ ವಿಭಾಗದಲ್ಲಿ ಪ್ರೊಫೆಸರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರು ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭಾದ ಉಪಾಧ್ಯಕ್ಷರೂ ಆಗಿದ್ದಾರೆ.

ಅನಂತಪುರ ಶ್ರೀ ಶಂಕರನಾರಾಯಣಯ್ಯ ಮತ್ತು ಶ್ರೀಮತಿ ರಾಧಮ್ಮ ದಂಪತಿಗಳ ಪುತ್ರರಾದ ಡಾ. ಕೃಷ್ಣ ಅವರು ಮೂಲತಃ ಕುಂಬಳೆ ಸಮೀಪದ ಪ್ರಸಿದ್ಧ ಸ್ಥಾನಿಕ ಮನೆತನಗಳಲ್ಲೊಂದಾದ ಅನಂತಪುರದವರು.

ಇವರ ಪತ್ನಿ ಶ್ರೀಮತಿ ಸುಮನ್‌ಕೃಷ್ಣ ಭಾಷಾ ಪ್ರಾಧ್ಯಾಪಿಕೆ. ಇವರ ಎರಡು ಹೆಣ್ಣುಮಕ್ಕಳಲ್ಲಿ ಹಿರಿಯವರಾದ ಡಾ. ಅಲಕಾ ಎಂ.ಬಿ.,ಬಿ.ಎಸ್. ಶಿಕ್ಷಣವನ್ನು ಭಾರತದಲ್ಲಿ ಪೂರೈಸಿ ತನ್ನ ವೈದ್ಯಕೀಯ ವೃತ್ತಿ ಮತ್ತು ಎಂ.ಆರ್.ಸಿ.ಪಿ. ತರಬೇತಿಯನ್ನು ಇಂಗ್ಲೆಂಡಿನಲ್ಲಿ ನಡೆಸುತ್ತಿದ್ದಾರೆ. ತನ್ನ ಪತಿ ಹೃದಯತಜ್ಞ ಡಾ. ನಿಖಿಲ್ ಜೋಶಿಯವರ ಜೊತೆಯಲ್ಲಿ ಎಡಿನ್‌ಬರ್ಗ್‌ನಲ್ಲಿ ನೆಲೆಸಿರುತ್ತಾರೆ. ಕಿರಿಯ ಮಗಳು ಅಂಕಿತ ಬಿ.ಇ. ಪದವೀಧರೆ. ವಿವಾಹದ ಬಳಿಕ ತನ್ನ ಪತಿ ಸಂತೋಷ್‌ರೊಂದಿಗೆ ಅಮೇರಿಕಾದ ನ್ಯೂಜೆರ್ಸಿಯಲ್ಲಿ ವಾಸಿಸುತ್ತಿದ್ದಾರೆ.

ಹೊಸ ಅಂಕಣ

## ಜ್ಞಾನ ಚರ್ಚೆ

### "ರಾವ್" ಜಾತಿಸೂಚಕ ಹೆಸರು!

"ಬ್ರಾಹ್ಮಣರಲ್ಲಿ ಒಂದು ಕಾಲದಲ್ಲಿ ತುಂಬಾ ಜನಪ್ರಿಯವಾಗಿದ್ದ 'ರಾವ್' ಎಂಬ ಪದವೂ ಕೂಡ ವರ್ಗಪಾರಮ್ಯವನ್ನು ಸೂಚಿಸುವಂತಿತ್ತು. ಈ 'ರಾವ್' ಮೂಲತಃ ಕನ್ನಡದ 'ರಾಯ' ಪದದ ಅನುಕರಣೀಯ ಶಬ್ದ. 'ರಾಯ' ಸಂಸ್ಕೃತದ 'ರಾಜ' ಪದದ ತದ್ಭವ ರೂಪ. ಅಂದರೆ 'ರಾವ್' ಎನ್ನುವ ಪದ ಮೂಲತಃ ಕ್ಷತ್ರಿಯ ಜಾತಿಸೂಚಕವಾಗಿದ್ದದ್ದು, ಅದು ತಂದುಕೊಡುತ್ತಿದ್ದ ವರ್ಗಗರಿಮೆಯ ಶಕ್ತತೆಯ ಕಾರಣದಿಂದ ಬ್ರಾಹ್ಮಣರೂ ಕೂಡ ಅದನ್ನು ತಮ್ಮ ಹೆಸರಿನಲ್ಲಿ ಧರಿಸಿಕೊಂಡುಬಿಟ್ಟರು."

***ಶಿಕಾಕು – ಸುಧಾ 25ನೇ ಎಪ್ರಿಲ್ 2013***

ಈ ಹೇಳಿಕೆ ಬಗ್ಗೆ ನಿಮ್ಮ ಪ್ರತಿಕ್ರಿಯೆ ಮತ್ತು ಅಭಿಪ್ರಾಯಗಳಿಗೆ ಸ್ವಾಗತ.

**E-mail : jnanashakthisss@gmail.com**

ಪತ್ರವ್ಯವಹಾರ : "ಜ್ಞಾನಶಕ್ತಿ", ಶ್ರೀ ಸುಬ್ರಹ್ಮಣ್ಯ ಸಭಾ (ರಿ.)
ಬಿಜೈ ಚರ್ಚ್ ರಸ್ತೆ, ಮಂಗಳೂರು – 575 003

ದೂರವಾಣಿ : **ಶ್ರೀ ಪಿ. ಶ್ರೀಕಾಂತ್ ರಾವ್ – 9343361618**

***ಆಯ್ದ ಅಭಿಪ್ರಾಯಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.***

## ಜ್ಞಾನ – ನುಡಿ

ಯಾವನು ಸಭೆ ಮುಂತಾದವುಗಳಲ್ಲಿ ಪರರ ದುರ್ಗುಣಗಳನ್ನು ಎತ್ತಾಡುವನೋ ಅವನು ತನ್ನ ದುರ್ಗುಣಗಳನ್ನು ಬಹುಮಟ್ಟಿಗೆ ಪ್ರಕಟಿಸಿಕೊಳ್ಳುತ್ತಾನೆ.

***ಚಾಣಕ್ಯ***

## ಜ್ಞಾನ – ನಗೆ



**ಮೇಷ್ಟ್ರು** : ಈಗ ಏನು ಮಾಡಿಕೊಂಡಿದ್ದೀಯಾ?
**ಗುಂಡ** : ಎಸ್. ಐ. ಸರ್...
**ಮೇಷ್ಟ್ರು** : ಭಲೇ... ಅಂದ್ರೆ ಸಬ್‌ಇನ್ಸ್‌ಪೆಕ್ಟರ್...?
**ಗುಂಡ** : ಅಲ್ಲ ಸರ್... ಸುಮ್ಮೆ ಇದ್ದೀನಿ ಅಂತ!

## ಕೋಡಿಂಬಾಡಿ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ಪ್ರತಿಷ್ಠಾ ಕಾರ್ಯಕ್ರಮ



**ಪುತ್ತೂರು :** ಕೋಡಿಂಬಾಡಿ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದಲ್ಲಿ ಅನುಜ್ಞಾ ಕಲಶ ಮತ್ತು ಬಾಲಾಲಯ ಪ್ರತಿಷ್ಠಾ ಕಾರ್ಯಕ್ರಮ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀ ತೀರ್ಥ ಮಹಾಸನ್ನಿಧಾನಂ ಗಳವರ ಪರಮಾನುಗ್ರಹದೊಂದಿಗೆ ಜೂನ್ 1 ಮತ್ತು 2ರಂದು ಬ್ರಹ್ಮಶ್ರೀ ವೇ। ಮೂ। ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ನಡೆಯಿತು. ಜೂನ್ 1ರಂದು ಬೆಳಗ್ಗೆ ದೇವತಾ ಪ್ರಾರ್ಥನೆ, ಗಣಪತಿ ಹೋಮ, ನವಗ್ರಹ ಹೋಮ, ಬಿಂಬಶುದ್ಧಿ, ಶ್ರೀದೇವಿಯ ಸನ್ನಿಧಿಯಲ್ಲಿ 49 ಕಲಶ ಪ್ರತಿಷ್ಠೆ, ಅಧಿವಾಸ ಹೋಮ, ಕಲಶಾಭಿಷೇಕ, ಪ್ರಸನ್ನ ಪೂಜೆ, ಗಣಪತಿ ಸನ್ನಿಧಿಯಲ್ಲಿ ನವಕಕಲಶಾಭಿಷೇಕ, ಸಂಜೆ ಸಂಹಾರತತ್ತ್ವಹೋಮ, ಧ್ಯಾನಸಂಕೋಚ ನಿಷ್ಕ್ರಿಯವಿಧಿ, ಬಾಲಬಿಂಬದ ಅಧಿವಾಸ ಪ್ರತಿಷ್ಠಾಹೋಮ, ಬಾಲಾಲಯದಲ್ಲಿ ರಾಕ್ಷೋಘ್ನಹೋಮ, ವಾಸ್ತುಹೋಮ, ವಾಸ್ತುಬಲಿ ನಡೆಯಿತು.

ಜೂನ್ 2ರಂದು ಪ್ರಾತಃಕಾಲದಲ್ಲಿ ಬಾಲಬಿಂಬಪ್ರತಿಷ್ಠೆ, ನವಕಕಲಶಾಭಿಷೇಕ, ಚಂಡಿಕಾ ಹೋಮ ಮಹಾಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು. **ಸಮಾಜ ಬಾಂಧವರು ಶ್ರೀ ದೇವಳದ ಜೀರ್ಣೋದ್ಧಾರದ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿ.**

## ಮಠಂತಬೆಟ್ಟು ಶ್ರೀ ರಾಜರಾಜೇಶ್ವರಿ ದೇವಸ್ಥಾನ ಜೀರ್ಣೋದ್ಧಾರಕ್ಕೆ ಚಾಲನೆ



**ಕೋಡಿಂಬಾಡಿ :** ಪುತ್ತೂರು ತಾಲೂಕು ಕೋಡಿಂಬಾಡಿ ಗ್ರಾಮದ ಇತಿಹಾಸ ಪ್ರಸಿದ್ಧ ಮಠಂತಬೆಟ್ಟು ಶ್ರೀ ರಾಜರಾಜೇಶ್ವರೀ ದೇವಸ್ಥಾನದ ಜೀರ್ಣೋದ್ಧಾರದ ಕೆಲಸಕ್ಕೆ ಇತ್ತೀಚೆಗೆ ಚಾಲನೆ ದೊರೆಯಿತು. ಮುಂದಿನ ಎರಡು ವರ್ಷಗಳ ಅವಧಿಯಲ್ಲಿ ಸಂಪೂರ್ಣ ಶಿಲಾಮಯ ಗರ್ಭಗುಡಿಯು ಜೀರ್ಣೋದ್ಧಾರಗೊಂಡು ಪುನಃಪ್ರತಿಷ್ಠೆ ಬ್ರಹ್ಮಕಲಶೋತ್ಸವದ ಸಂಭ್ರಮವನ್ನು ಕಾಣಲಿರುವ ಶ್ರೀ ದೇವಿಯ ಗರ್ಭಗುಡಿಯನ್ನು ಬಿಚ್ಚುವ ಕಾರ್ಯವು ಜೂನ್ 16ನೇ ಆದಿತ್ಯವಾರದಂದು ಶಿವಬ್ರಾಹ್ಮಣ ಸಮಾಜ ಸೇವಾ ಸಂಘ ಮತ್ತು ಮಿತ್ರ ಸಮಾಜ ಪುತ್ತೂರು ಹಾಗೂ ಊರಿನ ಹಲವು ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಮತ್ತು ಊರಿನ ಭಕ್ತಾದಿಗಳಿಂದ ಶ್ರಮದಾನದ ಮೂಲಕ ಜರುಗಿತು.

ಈ ಶ್ರಮದಾನದ ನೇತೃತ್ವವನ್ನು ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾದ ಶ್ರೀ ಉಮೇಶ್ ರಾವ್, ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಟಿ. ಅಣ್ಣಪ್ಪಯ್ಯ ಹಾಗೂ ಇತರ ಪದಾಧಿಕಾರಿಗಳು ವಹಿಸಿದ್ದರು. ಮುಂದಿನ ದಿನಗಳಲ್ಲಿ ನಡೆಯುವ ಶ್ರಮದಾನದಲ್ಲಿ ಭಾಗವಹಿಸುವರೇ ಜೀರ್ಣೋದ್ಧಾರ ಸಮಿತಿಯ ಕಾರ್ಯದರ್ಶಿ ಶ್ರೀ ನಾಗೇಶ್ ಶರ್ಮ (9901247080) ರವರನ್ನು ಸಂಪರ್ಕಿಸಬೇಕಾಗಿ ದೇವಳದ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಜ್ಞಾನ – ಗಾದೆ

ಆಟಿಡ್ ಪಂತಿ ಕೊಯ್ಯೆರೆ ಸಿಕ್ಕಣ್
ಆಟಿಡ್ ಜಾಲ್‌ಗ್ ಅಂಬಿ ಆಡ್ತಂಟ ಕೆಸರ್–ಕೆಸರ್
ಆಟಿಡ್ ಬಿತ್ತಿ ಬಿತ್ತ್ ಕೊಡಿಪುರಿ

## ಜ್ಞಾನ – ವಿಸ್ಮಯ

* ಬಸವನ ಹುಳು ಮೂರು ವರ್ಷಗಳ ಕಾಲ ಮಲಗಬಲ್ಲದು!
* ಗಿಳಿ ಮತ್ತು ಮೊಲ ತಮ್ಮ ಕತ್ತನ್ನು ತಿರುಗಿಸದೇ ತಮ್ಮ ಹಿಂದೆ ನೋಡಬಲ್ಲವು!
* ಹಾರಲು ಸಾಧ್ಯವಿಲ್ಲದ ಒಂದೇ ಒಂದು ಪ್ರಾಣಿ ಆನೆ!

Please log on to : www.subramanyasabha.com For all information on Subramanya Sabha and Address of Stanika in Mangalore, Bantwal & Moodabidri

*Publisher : Sri C. S. Rao, President, Shree Subrahmanya Sabha (R.), Kodialbail, Mangalore - 3*
*Editor : Sri M. S. Raghunath Rao, Darbe, Puttur* *Printed at : Rajesh Power Press, Darbe - 574 202, Puttur, D. K.*